51ಬ್ಬರ್ಬ್ರಾಹ್ಮಣಗ್ಗೆರ್ಧಾರಾಪೂರ್ವ್ವಕಂವೊಡೆವಲ್ಲಿ
52ಹಿರಿಯಭಣ್ಡಾರಿಹುಳ್ಳಯ್ಯನುಂದಂಡನಾಯ
53ಕಲಕ್ಕರಸರುಂಅಮೃತೇಸ್ವರರನಾಳ್ವಭುಮಲ್ಲಿಗಾವುಂ
54ಡನುಂಮಾದಿಗಾವುಂಡನುಂಗಕವರ್ಷದ ೧೦೬೭ ಈಶ್ವ
55ರಸಂವತ್ಸರದಮಾಘಸುದ್ಧ ೧೦ ಸೋಮವಾರ
56ಉತ್ತರಾಯಣಸಂಕ್ರಾನ್ತಿಸೂರ್ಯ್ಯಗ್ರಹಣದಿ
57ಪಾತದಂದುಮೂಲಸ್ಥಾನದಮೃತೇಶ್ವರದೇವರಪ್ರತಿಷ್ಠೆ
58ಯಂಮಾಡಿದೇವರಂಗಭೋಗಕ್ಕಂತ್ರಿಕಾಳಪೂಜೆ
59ನಿವೇದ್ಯಜೀರ್ಣ್ನೋದ್ಧಾರಕ್ಕಂಬಿಟ್ಟದತ್ತಿಊರಿಂಹಡು
ವಲು
60ತಂಮ್ಮಡಿಯುಕೆಱೆಯುಹಡುವಣಕೋಡಿಯುಬೆದ್ದಲೆ
61ಗಂಗನಗಳೆಯುಲುಮತ್ತಲೆರಡು ೭ ದೇವರಪೂರ್ವ್ವ
62ಭಿಮುಖದೊಳಗೆರೆಯಲ್ಲಿಗದ್ದೆಕಮ್ಮ ೭೫ ಕೆಱೆಯಃಕೆ
63ಳಗೆತೋಟಕಮ್ಮ ೪ ಹೆಜ್ಜುಂಕದವರಿಂಊರಿಂಸರ್ವ್ವನ
ಮಸ್ಯ
64ವಾಯುವಾಗಿನಂದಾದೀವಿಗೆಗೆಬಿಟ್ಟಗಾಣಇಗಳಬೆ

65ಳುವಳ್ಳಿಯಸ್ಥಳದದೇಶಿಬಣಂಜಿಗರಿಳ್ದುಬಿಟ್ಟದತ್ತಿಹೇ
66ಱಿಂಗೊಬ್ಬುಳಭತ್ತಮೆಳಸಿನಭಾರಕೊಬ್ಬ
67ಳ | ಎಲೆಯಹೇಱಿಂಗೆ ೧೦೦ | ಹೇಱಿಂಗೆ ೫೦ ಹ .
68ಸುಬೆಗೆಅಡಕೆ ೧೦ | ಮೆಳಸುಮಾನ ೧ | ಅಡಕೆಹೇಱಿಂ
69ಗೆ ೧೦೦ ಹೇಱಿಂಗೊಬ್ಬುಳುಪ್ಪು | ಗಾಣದ ೧ ಸೊಟಿಗೆಣ್ಣೆ
70ಇನ್ತೀಧರ್ಮ್ಮವಂಮಾಡಿಹೂಳಿಯಕೆಱೆ
71ಯತತ್ಪುರ್ಷಪಂಡಿತದೇವರ್ಗ್ಗೆಧಾರಾಪೂರ್ವ್ವಕಂಮಾ
72ಡಿಬಿಟ್ಟದತ್ತಿಇನ್ತೀಧರ್ಮ್ಮಮನಾರಾನುಂಪ್ರತಿಪಾ
73ಳಿಸಿದವರುಗಂಗೆಯತಡಿಯಲುಸಹಶ್ರ
74ವೇದಪಾರಗರಪ್ಪಬ್ರಾಹ್ಮಣರ್ಗ್ಗೆಸಹಶ್ರಕವಿಲೆಯಂ
75ಕೋಡುಂಕೊಳಗಂಹೊಂನಲುಕಟ್ಟಿಸಿಕೊಟ್ಟಫಲವ
76ಕ್ಕು | ಇನ್ತೀಧರ್ಮ್ಮವನಾರಾನುಂಕೆಡಿಸಿದವರಾ
77ಗಂಗೆಯತಡಿಯಲಾಬ್ರಾಹ್ಮಣರಂಸಹಶ್ರ
78ಕವಿಲೆಯಕೊಂದಪಾತಕತನವನೆಯ್ದುವರು ||
79ಸ್ವದತ್ತಂಪರದತ್ತಂವಾಯೋಹರೇತಿವಸುನ್ಧ
80ರಾ | ಷಷ್ಟಿರ್ವ್ವರ್ಷಸಹಶ್ರಾಣಿವಿಷ್ಟಾಯಾಂಜಾ
81ಯತೇಕ್ರಿಮಿ || ಹಾದಿಯಕೆಱೆಯಶಂಭುಶಕ್ತಿರ್ಲ್ಲಿ
82ಖಿತ
83*ನಂದನಸಂವತ್ಸರದಪಾಡಿವದಂದುಪನ್ನಾಯದವರು
...ಆಚಂದ್ರಾರ್ಕ್ಕ.........

20

ತರೀಕೆರೆಯಲ್ಲಿ ಬಾಣಾವಾರ ಕೃಷ್ಣಭಟ್ಟರ ವಶದಲ್ಲಿದ್ದ ತಾಮ್ರಶಾಸನ.

೩ ಪತ್ರಗಳು—ವ್ಯಾಘ್ರಮುದ್ರೆ.

೧ನೇ ಪತ್ರದ ಹಿಂಭಾಗ.

1ಓಂನಮೋನಾರಾಯಣಾಯ || ಜಯನ್ತಿಕ್ಷೀರವಾರಾಶಿನನ್ದನಾನನ್ದದಾಯಿ
2ನಃ | ಬ್ರಹ್ಮಾಂಡಮಂಡಳೀರವ್ಯಹರ್ಮ್ಯಸ್ತಂಭಾಹರೇರ್ಭ್ಭುಜಾಃ || ಕಳಾಕಾಹ
3ತಶಾರ್ದ್ದೂಳಃಕೋಪ್ಯಭೂದ್ಯದುಪುಂಗವಃ | ಅಭ್ಯಧೀಯತತದ್ದೇಶ್ಯೈಸ್ತತೋ
4ಸಾಹೊಯ್ಸಳಾಖ್ಯಯಾ || ತದ್ವಂಶ್ಯೇಷ್ವಭವದ್ವಂದ್ಯೋವಿಬುಧೈರ್ವ್ವಿ
5ಷ್ಣುವರ್ದ್ಧನಃ | ಯಸ್ಮಾಲ್ಲಕ್ಷ್ಮೀಪತೇರ್ಜ್ಜಾತೋ ನರಸಿಂಹಮಹೀಪತಿಃ ||
6ತೇನಪಟ್ಟಮಹಾದೇವ್ಯಾಂಜನಿತಸ್ಸಂಪದಾಂನಿಧಿಃ | ಬಲ್ಲಾಳಭೂಪತಿರ್ಯ್ಯೇ
7ನಪುತ್ರವತ್ಪಾಲಿತಾಪ್ರಜಾಃ || ಜಯತಿಸ್ಫುರತ್ಪ್ರತಾಪಪ್ರಕಾಶಿತಾ
8ಶೇಷಭುವನವಿಸ್ತಾರಃ ವಳಯಮಿವೋರ್ವ್ವೀವಳಯಂಕರೇವಹನ್ವೀರ
9ಬಲ್ಲಾಳಃ || ಸ್ವಸ್ತಿಸಮಧಿಗತಪಂಚಮಹಾಶಬ್ದಮಹಾಮಂಡಳೇಶ್ವರಂ |
10ದ್ವಾರಾವತೀಪುರವರಾಧೀಶ್ವರಂ | ವಾಸನ್ತಿಕಾದೇವೀಲಬ್ಧವರಪ್ರಸಾದಂ | ವಿಜ
11ಯಲಕ್ಷ್ಮೀವಿನೋದಂ | ವಿತರಣಗುಣಾನುಕೃತಭಾನುನಂದನಂ | ಸಕ
12ಳವಿಬುಧಜನಾನಂದನಂ | ವಿನುತವಿಭವೋಪಹಸಿತದಿವಿಜೇಂದ್ರಂ | ನಿಖಿಳ
13ಜನಾನಂದಚಂದ್ರಂ | ಪರಾಕ್ರಮಗುಣಪ್ರಕಟಿತಪಾರ್ತ್ಥಪ್ರಭಾವಂ | ಭುವನ
14ಸಮ್ಮತನಿಜಸ್ವಭಾವಂ | ವಿದಳಿತವಿಜಯಪಾಂಡ್ಯವಿಕ್ರಮಾಧಾರಗಿರಿದು

೨ನೇ ಪತ್ರದ ಮುಂಭಾಗ.

15ರ್ಗ್ಗಂ | ಪ್ರಣೂತಚಾತುರ್ಯ್ಯಪರಿಪಾಳಿತತ್ರಿವರ್ಗ್ಗ | ಸುಭಟಚೂಡಾಮಣಿ | ಕ್ಷತ್ರಿ
16ಯಶಿಖಾಮಣಿ | ಪರಿಪಾಳಿತಭೂಲೋಕಂ | ಪುಂಡರೀಕಪತಾಕಂ | ಧರ್ಮ್ಮ
17ನಿರ್ಮ್ಮಾಣನವೀನಧರ್ಮಪುತ್ರಂ | ವಿಶಿಷ್ಟವಿದ್ವಜ್ಜನಪ್ರೀತಿಪಾತ್ರಂ | ಧೈರ್ಯ್ಯಗುಣ
18ಮಂದರಂ | ವಿಳಾಸಪುರಂದರಂ | ಚೋಳಕಟಕಸೂಱೆಕಾಱ | ಮಂಡಳಿಕ

---

*ಈ ಪಙ್ಕ್ತಿ ಮೇಲ್ಭಾಗದಲ್ಲಿ ಬರೆದಿದೆ.

19ಬೇಂಟೆಕಾಱಂ | ರಿಪುರಾಜಗಂಡಭೇರುಂಡಂ | ಮಲಪರೊಳ್ಗಂಡಂ | ಇತ್ಯಾದಿನಾ
20ಮಾವಳೀವಿರಾಜಿತರಪ್ಪ ಶ್ರೀಮನ್ಮಹಾಮಂಡಳೇಶ್ವರಂತಳಕಾಡುಗಂಗವಾ
21ಡಿನೊಳಂಬವಾಡಿಬನವಸೆಹಾನುಂಗಲುಹಲಸಿಗೆಬೆಳುವಲತಿ
22ಳುಂಗದೇಶಂಗೊಂಡಭುಜಬಳವೀರಗಂಗನಸಿವಾರಸಿದ್ಧಿಗಿರಿದುರ್ಗ್ಗಮಲ್ಲ
23ಚೆಲದಂಕರಾಮನಸಹಾಯಶೂರನಿಶ್ಶಂಕಪ್ರತಾಪಹೊಯ್ಸಳಶ್ರೀವೀ
24ರಬಲ್ಲಾಳದೇವರುಶ್ರೀಮನ್ಮಹಾರಾಜಧಾನಿದೋರಸಮುದ್ರದನೆಲೆ
25ವೀಡಿನೊಳುಸುಖಸಂಕಥಾವಿನೋದದಿಂಪೃಥ್ವೀರಾಜ್ಯಂಗೆಯ್ಯುತ್ತವಿ
26ರ್ದ್ದಿಆಸನ್ದಿನಾಡಮೊಲ್ಲೇಶ್ವರವನಗ್ರಹಾರಂಮಾಡಿಆಪೂರವೊದ
27ಲುಗದ್ಯಾಣಅಯ್ವತ್ತಂಮಾಡಿಗ ೫೦ ಉಳಿದಶೇಷವ್ರುವಂಚಳಾಯವು
28ವಂಬಿಟ್ಟು | ಖಾಣ | ಎಳ್ಳು | ಜೋಳ | ನಲ್ಲಾವು | ನಲ್ಲೆತ್ತು | ಕೆಳುಕು | ಕಂಡಿಕೆ |

೧ನೇ ಪತ್ರದ ಹಿಂಭಾಗ.

29ವಣಖಾಣನಿಬನ್ದಿ | ನೂಲಹದಿಕೆ | ಅಡಕೆಯಸುಂಕ | ಬೆಳ್ಳಾಯಸುಂಕ | ಎಂಣ
30ಯಹಣವೊನ್ದುಱಬಳ | ಆಗಾನ್ತುಕವೊಳಗಾಗಿಸರ್ವ್ವಾಯಶುದ್ಧಿಕಟ್ಟುಗು
31ತ್ತಗೆಪಿಂಡಾದಾನಗದ್ಯಾಣನೂಱಂಮಾಡಿಗ ೧೦೦ ಸರ್ವ್ವಬಾಧಾಪರಿಹಾ
32ರವಾಗಿಸಕವರ್ಷ ೧೧೧೭ ನೆಯಕ್ರೋಧಿಸಂವತ್ಸರದಪುಶ್ಯಬಹುಳಸಪ್ತಮಿ
33ಮಂಗಳವಾರ | ಉತ್ತರಾಯಣಸಂಕ್ರಾನ್ತಿಯಲುಶ್ರೀವಜ್ರೇಶ್ವರದೇವರ
34ಶ್ರೀನರಸಿಂಹದೇವರಸಂನ್ನಿಧಿಯಲುತಮಗೆನಿಜರಾಜ್ಯೈಶ್ವರ್ಯ್ಯಾಯುರಾ
35ರೋಗ್ಯಾಭಿವೃದ್ಧ್ಯರ್ತ್ಥವಾಗಿಶ್ರೀವೀರಬಲ್ಲಾಳದೇವರುಆಅಶೇಷ
36ಮಹಾಜನಂಗಳ್ಗೆಧಾರಾಪೂರ್ವ್ವಕಂಮಾಡಿಕೊಟ್ಟರು | ಆಊರ
37ಸೀಮಾಸಂಬಂಧವೆಂತೆಂದಡೆಮೂಡಣಸೀಮೆಜೀಯರಕೆಱೆ
38ಯಕೆಳಗೆನಟ್ಟಕಲುಕಟ್ಟೆದಕೊಳ | ಆಗ್ನೇಯದಲು | ಮಚ್ಚೆಱಕಾಲವೊದಲ
39ಲುನಟ್ಟಕಲು | ತೆಂಕಲುಹಗರೆಯಹಳ್ಳ | ನೈ(ರಿ)ರಿತ್ಯದಲುಂ
40ಹಡುವಲುಂಗಿಜೆಯಹಳ್ಳ | ವಾಯವ್ಯದಲುಸಂಚರಿವಳ್ಳ
41ಅತ್ತಿಯಮರ | ಬಡಗಲುಅವಳಿಗಲ್ಲು | ಒಡಗೆಱೆಯೊಳಗಣಮು
42ಗ್ಗಡೆಯಕಲ್ಲು | ಈಶಾನ್ಯದಲುಹುಲಿಗಿಲಹಳ್ಳದಿಂಕೂಡಿತುಸೀಮೆ | ಇನ್ತೀ

೨ನೇ ಪತ್ರದ ಮುಂಭಾಗ.

43ಧರ್ಮ್ಮವಂಪ್ರತಿಪಾಳಿಸಿದವರುಪ್ರಯಾಗೆ | ವಾರಣಾಸಿಸೇತುಶ್ರೀರಂಗಪ್ರ
44ಮುಖವಪ್ಪಪುಂಣ್ಯತೀರ್ತ್ಥಂಗಳಲುಸಹಶ್ರವೇದಪಾರಗರಪ್ಪಬ್ರಾಹ್ಮಣ
45ರ್ಗ್ಗನಿತುಕಪಿಳೆಗಳಂಸಾಳಂಕಾರಂಮಾಡಿಕೊಟ್ಟಮಹಾಪುಂ
46ಣ್ಯವಂತರು | ಇಧರ್ಮ್ಮಕ್ಕಂನ್ಯಾಯವಂಚಿಂತಿಸಿದವರಾಪುಂಣ್ಯತೀರ್ತ್ಥಂ
47ಗಳಲನಿತುಬ್ರಾಹ್ಮಣರುಮನನಿತುಕಪಿಳೆಗಳುಮನಳಿದಮ
48ಹಾಪಾತಕರ್ || ಸ್ವದತ್ತಾಂಪರದತ್ತಾಂವಾಯೋಹರೇತವಸುಂಧರಾನ್ | ಷಷ್ಟಿ
49ವರ್ಷಸಹಸ್ರಾಣಿವಿಷ್ಠಾಯಾಂಜಾಯತೇಕ್ರಿಮಿಃ || ಸಾಮಾನ್ಯೋ
50ಯಂಧರ್ಮ್ಮಸೇತುರ್ನ್ನೃಪಾಣಾಂ | ಕಾಲೇಕಾಲೇಪಾಲನೀಯೋಭವದ್ಭಿಃಸರ್ವ್ವಾ

51ನೇತಾನ್ಭಾವಿನಃಪಾರ್ತ್ಥಿವೇಂದ್ರಾನ್ಭೂಯೋಭೂಯೋಯಾ
52ಚತೇರಾಮಚಂದ್ರಃ ‖ ಜೊಂಬಣಪಂಡಿತರಕವಿತೆ । ಬರವರಾಚಾರ್ಯ್ಯ
53ನೂರ್ಯ್ಯಣ್ಣಂಗಳಶಿಷ್ಯಬಾಚೆಯನಬರಹಮಂಗಳಮಹಾ‖ ಶ್ರೀ‖ ಶ್ರೀ
ಶ್ರೀಮಲಪರೊಳುಗಣ್ಡವೀರಬಲ್ಲಾಳದೇವ

21

ತರೀಕೆರೆಯಲ್ಲಿ ಶಾಮಜೋಯಿಸನ ವಶದಲ್ಲಿದ್ದ ತಾಮ್ರಶಾಸನ.

೩ ಪತ್ರಗಳು—ವರಾಹಮುದ್ರೆ.

೧ನೇ ಪತ್ರದ ಹಿಂಭಾಗ.

1ಶುಭಮಸ್ತು । ಶುಕ್ಲಾಂಬರಧರಂವಿಷ್ಣುಂಶಶಿವರ್ಣಂಚತು
2ರ್ಭುಜಂಪ್ರಸಂನವದನಂಧ್ಯಾಯೇತ್ಸರ್ವವಿಘ್ನೋಪಶಾಂತಯೇ ‖
3ಶ್ರೀಮದ್ವೇಂಕಟನಾಥಾಯವೇಣುನಾದವಿನೋದಿನೇ । ವೇದಾತೀತಾಯವೇದಾಂತ
4ವೇದ್ಯಾಯಚನಮೋನಮಃ ‖ ಸೀತಾಲಕ್ಷ್ಮಣಸಂಯುಕ್ತಂಆಂಜನೇಯಾಭಿ
5ವಂದಿತಂ । ಕಾರುಂಣ್ಯಮೂರ್ತಿಕಂಜಾಕ್ಷಂರಾಮಚಂದ್ರಂನಮಾಂಮ್ಯಹಂ
6ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ । ತ್ರೈಲೋಕ್ಯನಗರಾರಂಭ
7ಮೂಲಸ್ತಂಭಾಯಶಂಭವೇ ‖ ಹರೇರ್ಲೀಲಾವರಾಹಸ್ಯದಂಷ್ಟ್ರಾದಂ
8ಡಸ್ಸಪಾತುವಃ । ಹೇಮಾದ್ರಿಕಲಶಾಯತ್ರಧಾತ್ರೀಛತ್ರಶ್ರಿಯಂದಧೌ
9ಸ್ವಸ್ತಿಶ್ರೀಜಯಾಭ್ಯುದಯಶಾಲಿವಾಹನಶಕವರುಷ ೧೫೭೩ ನೆಯ
10ಮನ್ಮಥಸಂವತ್ಸರದಮಾರ್ಗಶಿರ ಬ ೭ ಚಂದ್ರವಾರದಲ್ಲಿಶ್ರೀ
11ಮತುಸಂಥೇಬೆಂನೂರಮಾವಲಯಿಂಮಡಿಹನುಮಪ್ಪನಾಯ
12ಕರಪೌತ್ರರಾದ । ನಿಚ್ಚಮದವಣಿಗಹನುಮಪ್ಪನಾಯಕರಪು
13ತ್ರರಾದ । ಸರಜ್ಯಾಹನುಮಪ್ಪನಾಯಕರೂಭಾರದ್ವಾಜಗೋತ್ರ
14ದಆಶ್ವಲಾಯನಸೂತ್ರದರುಕ್ಶಾಖಾಧ್ಯಾಯಿಗಳಾದಯರ
15ಚೆಳದಣನವಿಭಟರಪೌತ್ರರಾದತಿರುಮಲಭಟ್ಟರಪುತ್ರರಾದ
16ಜಕಾಭಟ್ಟರಿಗೆ । ಪೂರ್ವದತ್ತವಾಗಿನಡದುಬರುತಿದಸ್ವಾಸ್ಥೆಗೆಮಾ
17ಡಿಕೊಟ್ಟಜೀರ್ಣೋದ್ಧಾರದತಾಂಬ್ರದಶಾಸನದಕ್ರಮವೆಂತೆಂದರೆ
18ಸ್ವಸ್ತಿಶ್ರೀಜಯಾಭ್ಯುದಯಶಾಲಿವಾಹನಶಕವರ್ಷ ೧೫೭೧ ನೆಯ
19ವಿರೋಧಿಸಂವಛರದಪುಷ್ಯಶುಧ ೭ ಚಂದ್ರವಾರಮಕರಸಂಕ್ರಾಂತಿ

೨ನೇ ಪತ್ರದ ಮುಂಭಾಗ.

20ಪುಂಣ್ಯಕಾಲದಲಿಶ್ರೀಮದ್ರಾಜಾಧಿರಾಜರಾಜಪರಮೇಶ್ವರಶ್ರೀ
21ವೀರಪ್ರತಾಪಶ್ರೀವೀರವೇಂಕಟಪತಿದೇವಮಹಾರಾಯರುಪೆನು
22ಗೊಂಡೆಪಟ್ಟಣದಲ್ಲಿರತ್ನಸಿಂಹಾಸನಾರೂಢರಾಗಿಸಕಲಪ್ರ
23ತ್ಥ್ವಿಪಾಲಿಸುವಸಮಯದಲ್ಲಿ । ಅವರದಕ್ಷಿಣಭುಜಾದಂಡ
24ರಾದಸಂಥೇಬೆಂನೂರಪುವ್ವಲಿಕೆಂಗಪ್ಪನಾಯಕರಪುತ್ರರಾ

25ದಹಿರೇಹನುಮಪ್ಪನಾಯಕರಸಹೋದರರಾದಬಾಲಗಿರಿ
26ನಾಯಕರು | ಭಾರದ್ವಾಜಗೋತ್ರದಆಶ್ವಲಾಯನಸೂತ್ರದರು
27ಕ್ಪ್ರಯಜುಶ್ಯಾಖಾಧ್ಯಾಯಿಗಳಾದಯುರಗುಳದಕೊಂಡಾವರ್ಯುರಪೌತ್ರರಾ
28ದತಿರುಮಲಿಭಟ್ಟರಪುತ್ರರಾದಕೋನೇರಿಭಟ್ಟರಿಗೆನಂಮರಾ
29ಜ್ಯಕ್ಕೆ ಸಲುವಕಾತೂರಸೀಮೆಯಲ್ಲಿ | ಅತಿವೋಘಹೊಂನಿಭಟ್ಟರ
30ದೇವರಭಟ್ಟರಿಗೆಸಲುವಋಘಾಧ್ಯಕೆಜ್ಯೋತಿಷ್ಯಕೆಸ್ವಾಸ್ತ್ಯ
31ರಲಾಗಿಅವರವಂಶಉಮ್ರುತನಷ್ಟವಾಗಿಹೋದಸಮಂಧಆಸ್ವಾಸ್ತೇ
32ನುಮಕರಸಂಕ್ರಾಂತಿಪುಂಣ್ಯಕಾಲದಲ್ಲಿಸಹಿರಂಣ್ಯೋದಕದಾನ
33ಧಾರಾಪೂರ್ವಕವಾಗಿದಾನಾಧಿಕ್ರಯವಿನ್ಮಯಯೋಗ್ಯಸರ್ವಮ
34ನ್ಯವಾಗಿಶ್ರೀರಾಮಚಂದ್ರದೇವರಪ್ರೀತಿಯಾಗಿನಂಮಹಿರೇಹನುಮ
35ಪ್ಪನಾಯಕರಿಗೆಪುಂಣ್ಯಲೋಕಾವಾಪ್ತಿಆಗಬೇಕೆಂದುರಾವೂರ್ಪ
36ಣವಮಾಡಿಕೊಟ್ಟು | ದಾನಪಟ್ಟೇನುಬರಸಿಕೊಟ್ಟುಸಾರೋಧಾರವಾ
37ಗಿನಡದುಬರುತ್ತಿದ್ದಲ್ಲಿ | ಅದಾನಪಟ್ಟೆಯುಸಿಥಿಲವಾದಸಮಂ
38ಧ | ಶ್ರೀಮತ್ಸಂಥೆಬೆಂನೂರವಾಪ್ಪಲಯಿಂಮ್ಮಡಿಹನುಮಪ್ಪನಾ
39ಯಕರಪೌತ್ರರಾದನಿಜ್ಜ ಮದವಣಿಗಹನುಮಪ್ಪನಾಯಕರ
40ಪುತ್ರರಾದ | ಸರಜ್ಯಾಹನುಮಪ್ಪನಾಯಕರು | ಭಾರದ್ವಾಜಗೋ
41ತ್ರದಆಶ್ವಲಾಯನಸೂತ್ರದರುಕ್ಪ್ರಯಜುಶ್ಯಾಖಾಧ್ಯಾಯಿಗಳಾದಯು
42ರಗುಳದಕೋನೇರಿಭಟ್ಟರಪೌತ್ರರಾದತಿರುಮಲಭಟ್ಟರಪುತ್ರ

೨ನೇ ಪತ್ರದ ಹಿಂಭಾಗ.

43ರಾದಜಕ್ಕಾಭಟ್ಟರಿಗೆ | ಮನ್ಮಥಸಂವತ್ಸರದಮಾರ್ಗಶಿರ ಬ ೩
44ಚಂದ್ರವಾರದಲ್ಲಿ | ಕಲ್ಲತ್ತಿವೀರಭದ್ರದೇವರಸಂನಿಧಾನದಲ್ಲಿಬ
45ಸವೇಶ್ವರದೇವರಗುಡಿಯಮುಂದೆಮಹಾದಾನಗಳಮಾಡುವಸ
46ಮಯದಲ್ಲಿ | ಕಾತೂರಸೀಮೆಯಸ್ಥಳ | ಹಿರೇಕಾತೂರಾಸ್ಥಳ ೧ ಹಾದಿಕೆ
47ರೆಸ್ಥಳ ೧ ಕುಂಟ್ಟನಮಡುವಿನಸ್ಥಳ ೧ ಅಮ್ರುತಾಪುರದಸ್ಥಳ ೧ ದೊರ
48ನಹಾಳಸ್ಥಳ ೧ ತರೀಕೆರೆಸ್ಥಳ ೧ ಚಿಕ್ಕಕಾತೂರಸ್ಥಳ ೧ ದುಗ್ಗನಹಳಸ್ಥ
49ಳ ೧ ಅಂತುಸ್ಥಳ ೧ಂಕ್ಕೆದಿಗ್ವಿವರ | ಪೂರ್ವದಿಕ್ಕಿಗೆ | ಕೂಡಿಗಲೂ
50ರ | ರಾಜುಗೆರೆ | ಮೂಡಣ | ಕೋಡಿಯಮುಂದಣ | ಆಲದಮ
51ರದಬಡುಉ | ದಕ್ಷಿಣದಿಕ್ಕಿಗೆ | ಕಾಮನದುರ್ಗಕ್ಕೆ | ತೆಂಕಣ
52ನ್ಯಾಯದಹಳಾ | ಪಶ್ಚಿಮದಿಕ್ಕಿಗೆ | ಹಲಸೂರಪಡುವಣ .
53 . .ನಿಹಳಾ | ಉತ್ತರದಿಕ್ಕಿಗೆ | ಗಿಣಿರಾಮನಗುಡ್ಡಕ್ಕೆಬಡಗ
54ಣ | ಸಿದನಕಟ್ಟೆಸರುಉ | ಯೀಚತುಃಸೀಮಾಮಧ್ಯದಲ್ಲಿಯಾ
55ಕಾತೂರಸೀಮಾಸ್ಥಳ ೧ಂಕ್ಕೆಸಲುವಗ್ರಾಮಾನುಗ್ರಾಮಗಳಲ್ಲಿ |
56ಋಘಾದಿಕೆಜ್ಯೋತಿಷ್ಯಕ್ಕೆಸಲುವಗದ್ದೆತೋಟಹೊಲಮನೆಮುಂ
57ತಾದಭೂಮಿಯೊಳಗೆಯಿದ್ದನಿಧಿನಿಕ್ಷೇಪಜಲಪಾಷಾಣಅ

58ಕ್ಷೀಣಿಆಗಾಮಿಸಿಧಸಾಧ್ಯಂಗಳೆಂಬಅಷ್ಟಭೋಗಂಗಳುತೇ

59ಜಸ್ಸ್ವಾಂಮ್ಯಶುಭಶೋಭನವುುಂಜಿಮದುವೆಚತುಶ್ಶಾಖೆ

60ಷೋಡಶಕರ್ವಂಗಳಲ್ಲಿ । ಪುಂಣ್ಯಾಹವಾಚನೆನಾಂದೀಗ್ರಹ

61ರಾಧನೆಮುಹೂರ್ತಬ್ರಹ್ಮದಾಯಮುಂತಾದಸಲುವಸ್ವಾಂಮ್ಯ

62ವನು । ಸರ್ವ್ವವೂಂನ್ಯವಾಗಿನೀಉನಿಂಮಪುತ್ರಪೌತ್ರಪಾರಂ

63ಪರಿಯಾಗಿಆಚಂದ್ರಾರ್ಕ್ಕಸ್ಥಾಯಿಗಳಾಗಿಅನುಭವಿಸಿಕೊಂ

64ಡುಸುಖಪಲ್ಲಿಹದೆಂದುನಂಮ್ಮಪಿತೃಗಳಿಗೆಅಕ್ಷಯಾಪುಂ

65ಣ್ಯಲೋಕಾವಾಪ್ತಿಆಗಬೇಕಾಗಿರಾವೂರ್ಪಣವಮಾಡಿಬ

66ರಸಿಕೊಟ್ಟಜೀರ್ನೋಧಾರಡತಾಂಬ್ರದಧರ್ಮಶಾಸನ

೩ನೇ ಪತ್ರದ ಮುಂಬಾಗ.

67ಬಲಿಖಿತಳು । ಯಿದಾನಕ್ಕೆಫಲಗ್ರಂಥ ॥ ದಾನಪಾಲನೆಯೋ

68ರ್ಮಧ್ಯೇದಾನಾಛ್ರೇಯೋನುಪಾಲನಂ । ದಾನಾತ್ಸ್ವರ್ಗಮವಾ

69ಪ್ನೋತಿಪಾಲನಾಪಚ್ಯುತಂಪದಂ ॥೧॥ ಸ್ವದತ್ತಾದ್ವಿಗುಣಂ

70ಪುಂಣ್ಯಂಪರದತ್ತಾನುಪಾಲನಂ । ಪರದತ್ತಾಪಹಾರೇಣ

71ಸ್ವದತ್ತಂನಿಷ್ಫಲಂಭವೇತು ॥೨॥ ಸ್ವದತ್ತಾಂಪ್ವಾಪರದತ್ತಾಂ

72ವ್ವಾಯೋಹರೇತಿವಸುಂಧರಾಂ । ಶಷ್ಟಿರ್ವರುಷಸಹ .

73ಹಸ್ರಾಣಿವಿಷ್ಟಾಯಾಂಜಾಯತೇಕ್ರಿಮಿಃ ॥೩॥ ಸ್ವದತ್ತಾಪುತ್ರಿ

74ಕಾಧಾತ್ರೀಪಿತೃದತ್ತಾಸಹೋದರೀ । ಪರದತ್ತಾಸ್ವಮಾತಾಚ

75ದತ್ತಭೂಮಿಂಪರಿತ್ಯಜೇತು ॥೪॥ ಯೇಕ್ಯೈವಭಗಿನೀಲೋಕೇಸ

76ರ್ವೇಷಾಮೇವಭೂಭುಜಾಂ । ನಭೋಜ್ಯಾನಕರಗ್ರಾಹ್ಯಾವಿಪ್ರದ

77ತ್ತವಸುಂಧರಾಯಿಂದ್ರಃಪ್ರಭತಿಚಾಂಡಾಲೀಂಕಿಮಿದಂಪಶ್ಯ

78ತ್ಯೇತ್ವಯಾ । ಶ್ವಮಾಂಸೆಂಸುರಯಾಸಿಕ್ತಂಕಪಾಲೇನಚಿತಾಗ್ನಿ

79ನಾ । ದೇವಬ್ರಾಂಹ್ಮಣವಿತ್ತಾನಿಬಲಾದಪಹರಂತಿಯೇ । ತೇಷಾಂ

80ಪಾದರಜೋಭೀತ್ಯಾಚರ್ಮಣಾಪಿಹಿತಂಮಯಾ ॥೬॥ ನ

81ಷ್ಟಂಕುಲಂಭಿಂನತಡಾಕಕೂಪಂಪ್ರಭ್ರಷ್ಟರಾಜ್ಯಂಶರಣಾ

82ಗತಂಚ । ಗಾಂಬ್ರಾಹ್ಮಣಂದೇವಗ್ರಹಾಲಯಂಚಯೋಉದ್ಧರೇ

83ತ್ಪೂರ್ವಶತಾಧಿಕಂಫಲಂ ॥೭॥ ಮದ್ವಂಶಜಾಪರಮಹೀ

84ಪತಿವಂಶಜ್ಯಾವಾಯೇಂನ್ಯೇನ್ರುಪಾಸತತಮುಜ್ವಲಧರ್ಮಚಿ

85ತ್ತಾ । ಮದ್ಧರ್ಮ್ಮವೇವಸತತಂಪರಿಪಾಲಯಂತಿತತ್ಪಾದುಕಾ

86ದ್ವಯುವಃಹಂಶಿರಸಾವಹಾಮಿ । ಶ್ರೀರಾಮ ।

22

ತರೀಕೆರೆಯಲ್ಲಿ ಯೆಡೆಹಳ್ಳಿ ರಾಮಭಟ್ಟರ ವಶದಲ್ಲಿದ್ದ ತಾಮ್ರಶಾಸನ.

೧ನೇ ಪತ್ರದ ಹಿಂಭಾಗ.

1ನಿರ್ವಿಘ್ನಮಸ್ತು

2ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇತ್ರೈಲೋಕ್ಯನಗರಾರಂ

3ಭಮೂಲಸ್ತಂಭಾಯಶಂಭವೇ | ೧ | ಹರೇರ್ಲೀಲಾವರಾಹಸ್ಯದಂಷ್ಟ್ರಾದಂ

4ಡಸ್ಸಪಾತುವಃಹೇಮಾದ್ರಿಶಿ ಖರಾಯತ್ರಧಾತ್ರೀಛತ್ರಶಿಯಂದಧೌ || ೨ ||

5ಸ್ವಸ್ತಿಶ್ರೀಜಯಾಭ್ಯುದಯಶಾಲಿವಾಹನಶಕವರ್ಷಸಾ ೧೬೦೩ನೆ

6ಯದುರ್ಮತಿಸಂವತ್ಸರದ | ವೈಶಾಖಶು ೩ಲ್ಲುಶ್ರೀಮತ್ಸಂಥೇ

7ಬೆಂನೂರರಾಮಚಂದ್ರಸ್ವಾಮಿಯಪಾಪದ್ಮಾರಾಧಕರಾದಹನುಮ

8ಂತ್ತದೇವರನಿಜಭಕ್ತರಾಪ | ಮಾವ್ವಲಾಂನ್ವಯದಯಿಂಮಡಿಹನು

9ಮಪ್ಪನಾಯಕರಪ್ರಪೌತ್ರರಾದ | ನಿಚ್ಚಮದವಣಿಗಹನುಮಪ್ಪನಾ

10ಯಕರಾಪೌತ್ರರಾದಶರಜಾಹನುಮಪ್ಪ | ನಾಯಕರಪುತ್ರರಾದ | ಸೀತಾ

11ರಾಮಪ್ಪನಾಯಕರು | ಜಾಮದಗ್ನ್ಯವತ್ಸಗೋತ್ರದಆಶ್ವಲಾಯನ

12ಸೂತ್ರದ | ರುಕ್ಶಾಖಾಧ್ಯಾಯಿಗಳಾದ | ಡಣಾಯಕಕೃಷ್ಣಪ್ಪನಪ್ರಪೌ

13ತ್ರನಾದರಾಮಕೃಷ್ಣಪ್ಪನಪೌತ್ರನಾದ | ತಿರುಮಲೈಯನಪುತ್ರನಾದ |

14ರಾಯಸದವೆಂಕೈಯಗೆಬರ್ಸಿಕೊಟ್ಟಭೂದಾನಶಾಸನದಕ್ರಮವೆಂ

15ತೆಂದರೆತೀರ್ಥರಾಜಪುರದಲ್ಲಿಸುರಾಲಯವಕಟ್ಟಿಸಿಪ್ರತಿಷ್ಟೆ

16ಮಾಡಿದಶ್ರೀವೆಂಕಟೇಶ್ವರಸ್ವಾಮಿದೇವತಾಕಟ್ಟಳೆಗೆಪ್ರಾಕುನಳ

17ಸಂವತ್ಸರದಘಾಲ್ಗುಣಶು ೧೦ಲ್ಲುಹಿರೇಕಾತೂರಗ್ರಾಮದಲ್ಲಿಕೊಟ್ಟ

18ದ್ದಗ ೩೦ ವರಹನಭೂಮಿಯಿಂದಾಏನುಉತ್ಪತ್ತ್ಯವಾ

19ಕದಿಲ್ಲಆಭೂಮಿಯಅರಮನೆಗೆಕಟ್ಟಿಕೊಂಡು | ದೇವತಾ

20ಸೇವೆಸಾಂಗವಾಗಿನಡವರೀತಿಗೆಬದಲಾಸ್ವಾಸ್ಥ್ಯಯನು | ನೂತನ

21ವಾಗಿಚೆಂನಾಂಬಾಪುರದಅಗ್ರಹಾರವಮಾಡಿದ್ಧೇಸೆಯಿ

೨ನೇ ಪತ್ರದ ಮುಂಭಾಗ.

22ದಕೆಸಹಾಕೊಡಬೇಕೆಂದುನೀನುಕೇಳಕೊಂಡಸಂಮಂ

23ಧವೊದಲುಕೊಟ್ಟದ್ದದಾನಪತ್ರವನೂಪಪ್ಪಿಸಿಕೊಂಡುಪ್ರತಿ

24ಯಾಗಿಬಿಟ್ಟಸ್ವಾಸ್ಥ್ಯ | ನಂಮರಾಜ್ಯಕೆಸಲುವಕಾತೂರಶೀಮೆಯೊ

25ಳಗಣಚಿಕ್ಕಾತೂರಸ್ಥಳದಗೋವಿಂದಪುರದಗ್ರಾಮವಂನ್ನು

26ಈಭೂಮಿಯಲ್ಲಿನೂತನವಾಗಿಕಟ್ಟಿದರುದ್ರಪುರಸಹಿ

27ತವಾಗಿ | ಅಕ್ಷತ್ರಿತೀಯಪುಂಣ್ಯಕಾಲದಲ್ಲಿ | ತಮ್ಮಮಾತಾ

28ಪಿತೃಗಳಗೆಅನೇಕಧರ್ಮವಾಗಲಿಯೆಂದುಸಹಿರಂಣ್ಯೋ

29ದಕದಾನಧಾರಾಪೂರ್ವಕದಿಂರಾಪೂರ್ಣಮಾಡಿಕೊಟ್ಟವಾ

30ಗಿಯುಗ್ರಾಮಮಂಡಲಕೆಸಲುವಭೂಮಿಚತುರಾಸೀಮೆಗಡಿಗೆ

31ಸ್ಥಾಪಿತವಮಾಡಿದಶಿಲಾವಿವರಪೂರ್ವದಿಕಿಗೆಯಿಂದಾವರ

32ದಬಗಹಳ್ಳದಸಮೀಪದಲಿದಾರಿಮರದವತ್ತಿನಲ್ಲಿನೈರುತ್ಯ

33ಮುಖವಾಗಿಕಲ್ಲು ೧ ಬಸವನಹಳಹಾಯಿಹೊಳೆಸಮೀ

34ಪಲಿಪಶ್ಚಿಮಮುಖವಾಗಿಕಲು ೧ ದಕ್ಷಿಣದಿಕಿಗೆಕೆಂಗ

35ರೆಹಳ್ಳದಸವಿೂಪದಲ್ಲಿವಾಯುವ್ಯಮುಖವಾಗಿಕಲು ೧ ಹು

36ಚ್ಚನಕಟ್ಟೆದಕ್ಷಿಣದವಳಗೆರೇಕೋಡಿಯುಲ್ಲಿಉತ್ತರಮು

37ಖವಾಗಿಕಲ್ಲು ೧ ಪಶ್ಚಿಮದಿಕಿಗೆ | ಜಾರಗಲ್ಲಮಠದಮೂಲೆ

38ಸರುವಿನಹೆದ್ದಾರಿವತ್ತಿನವೊರಡೀಬಳಿಯುಣಿಆ .

39ಲಮರನಸವಿೂಪದಲ್ಲಿಪೂರ್ವಮುಖವಾಗಿಕಲ್ಲು ೧ ಬೆ

೨ನೇ ಪತ್ರದ ಹಿಂಭಾಗ.

40ಹಿನವೆಂಕಟೇಶನಕಲ್ಲಿನಸವಿೂಪದಲಿಹಕ್ಕಲಸರುಹಿ

41ನವತ್ತಿನಲುಪೂರ್ವಮುಖವಾಗಿಕಲ್ಲು ೧ ಉತ್ತರದಿಕ್ಕಿಗೆ | ಚಿ

42ಕ್ಕಾತೊರಕೆರೇವಡಲಲ್ಲಿನೆಲನಮರನದೊಡ್ಡಬದುವಿನಮೇಲೆ

43ಆಗ್ನೆಮುಖವಾಗಿಕಲು ೧ ಯಿಾಕೆರೆಮೋಲುಗಡೆಯುಹಕ್ಕಲ

44ಬದುವಿನಮೂಲೆಯುಲುದಕ್ಷಿಣಮುಖದಾ | ಕಲ್ಲು ೧ ಗ್ರಾಮದ

45ಮುಂದೆಉತ್ತರಮುಖವಾಗಿಕಲ್ಲು ೧ ಅಂತ್ತು ಕಲ್ಲು ೯ ಇವಂಥ

46ತ್ತುಶಿಲೆನ . . ಗಾದಭೂಮಿಗೆಸಲುವಗದ್ದೆಬೆದ್ದಲುತ್ತೊಟ

47ತ್ತುಡಿಕೆಕಾಡಾರಂಭನೀರಾರಂಭಕಡುವಣಕಾಶಾವಗ್ಗ್ರಸು

48ಂಕನಕಲಸುವರ್ಣಾದಾಯುದವಸಾದಾಯುಮುಂತಾದಉತ್ಪ

49ತ್ಯವನೂಆಭೂಮಿಯೊಳಗಿದ್ದನಿಧಿನಿಕ್ಷೇಪಜಲಪಾಪಾ

50ಣಅಕ್ಷಿಣಿಆಗಾಮಿಸಿದ್ಧಸಾಧ್ಯಂಗಳೆಂಬಅಷ್ಟಭೋ

51ಗತೇಜಸ್ವಾಮ್ಯವನೂಬೀಳಭೂಮಿಯಲಿಆಗಾಮಿವೂ

52ಡಿದವಿಶೇಸಫಲಸಹಂನಿತವಾಗಿ | ಸಂತಾನಪಾರಂಪ

53ರ್ಯ್ಯದಲಿಆಚಂದ್ರಾರ್ಕ್ಕಸ್ವಾಯಿಗಳಾಗಿಸುಖದಿಂ

54ಭೋಗಿಸಿಕೊಂಡುಬಾಹದಕ್ಕೆ | ದೇವತಾಸೇವೆಗು | ಅ

55ಗ್ರಹಾರದಬ್ರಾಂಹ್ಮರಿಗೆಸಹಾನಡಸುವದೆಂ

56ದುಬರಸಿಕೊಟ್ಟಭೂದಾನಶಾಸನ | ಯಿದಕ್ಕೆದೇವ

57ತಾಸಾಕ್ಷಿ | ಆದಿತ್ಯಚಂದ್ರಾವನಿಲೋನಲಶ್ಚದ್ಯೌ

58ರ್ಭೂಮಿರಾಪಂಹೃದಯುಂಯಮಶ್ಚಅಹಶ್ಚ(ರಾ)

೩ನೇ ಪತ್ರದ ಮುಂಭಾಗ.

59ರಾತ್ರಿಶ್ಚಉಭೇಚಸಂಧ್ಯಾಧರ್ಮಸ್ಯಜಾನಾತಿನರಸ್ಯವಿತ್ತಂ | ದಾ

60ನಪಾಲನಯೋರ್ಮಧ್ಯೇದಾನಾಛ್ರೇಯೋನುಪಾಲನಂದಾನಾತ್ಸರ್ಗವೂ

61ವಾಪ್ನೋತಿಪಾಲನಾದಚ್ಯುತಂಪದಂ | ೧ | ಸ್ವದತ್ತಾದ್ವಿಗುಣಂಪು

62ಣ್ಯಂಪರದತ್ತಾನುಪಾಲನಂಪರಪತ್ತಾಪಹಾರೇಣಸ್ವದತ್ತಂನಿ

63ಷ್ಫಲಂಭವೇತ್ | ೨ | ಸ್ವದತ್ತಾಪುತ್ರಿಕಾಧಾತ್ರೀಪಿತೃದತ್ತಾಸಹೋದರೀಅಂ

64ನ್ಯದತ್ತಾಚಮಾತಾಚ | ದತ್ತಭೂಮಿಂಪರಿತ್ಯಜೇತ್ | ೩ | ಯಿಂದ್ರಃಪ್ರ

65ಭತಿಚಾಂಡಾಲೀಂಕಿಮಿದಂಪಚ್ಚತೇತ್ವಯಾಶ್ವಮಾಂಸಂಸುರಯಾ

66ಸಿ | ಕ್ತಂಕಪಾಲೇನಚಿತ್ತಾಗ್ನಿನಾದೇವಬ್ರಾಂಹ್ಮಣವಿತ್ತಾನಾಂಬಲಾ

67ದಪಹರಂತ್ರಿಯೇತ್ರೇಷಾಂಪಾದರಜೋಭೀತ್ಯಾಚರ್ಮಣಾಃಪಿಹಿ

68ತಂಮಯಾ | ೪ | ಅನ್ಯೇಷಾಂಭರ್ದಿತಂಭುಂಗ್ತೆಶ್ಯಾಪ್ತಿಶ್ವಚ್ಛೆರ್ದಿ

69ತಂನತುತತಃಕಷ್ಟತರೋನೀಚಸ್ವಯಂದತ್ತಾಪಹಾರಣಾ | ೫ |

70ಯೇಕೈವಭಗಿನೀಲೋಕೇಸರ್ವೇಶಾಮೇವಭೂಭುಜಾಂನಭೋಜ್ಯಾನಕ

71ರಗ್ರಾಹ್ಯಾವಿಪ್ರದತ್ತಾವಸುಂಧರಾ | ೬ | ಮದ್ವಂಶಜಾಃಪರಮಹೀ

72ಪತಿವಂಶಜಾವಾಯೇಂನ್ಯೇನ್ಸುಪಾಸ್ಸತತಮುಜ್ವಲಧರ್ಮಚಿತ್ತಾಃಮದ್ಧ

73ರ್ಮಮೇವಸತತಂಪರಿಪಾಲಯಂತಿತತ್ಪಾದುಕದ್ವಯಮಹಂಶಿರ

74ಸಾವಹಾಮಿ | ೭ | ಮಂಗಳಮಹಾ ಶ್ರೀ ಶ್ರೀ ಶ್ರೀ ಶ್ರೀರಾಮ

23

ತರೀಕೆರೆ ತಾಲೂಕು ಗೋವಿಂದಪುರದ ಅಗ್ರಹಾರದ ತಾಮ್ರ ಶಾಸನದ ಪ್ರತಿ.

ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ | ತ್ರೈಲೋಕ್ಯನಗರಾರಂಭಮೂಲಸ್ತಂಭಾಯಶಂಭವೇ ||೧|| ಹರೇರ್ಲೀಲಾವರಾಹಸ್ಯದಂಷ್ಟ್ರಾದಂಡಸ್ಸಪಾತುವಃ | ಹೇಮಾದ್ರಿಕಲಶಾಯತ್ರಧಾತ್ರೀಛತ್ರ ಶ್ರಿಯಂದಧೌ ||೨|| ಸ್ವಸ್ತಿಶ್ರೀಜಯಾಭ್ಯುದಯ|ಶಾಲಿವಾಹನಶಕವರುಷ ೧೬೦೩ನೆಯ ದುರ್ಮತಿಸಂ|ರದವೈಶ್ಯಾಖಶು ೩ಲ್ಲುಶ್ರೀಮತ್ಸಂತೇಬೆಂನೂರರಾಮಚಂದ್ರಸ್ವಾಮಿಯಪಾದಪದ್ಮಾರಾಧಕರಾದಹನುಮಂತದೇವರನಿಜಭಕ್ತರಾದ ಪೂರ್ವ್ವಲ್ಲಾಂನ್ವಯುದಯಿಂಮಡಿಹನುಮಪ್ಪನಾಯಿಕರಪ್ರಪೌತ್ರರಾದ ನಿಜ್ಜಮದವಶಿಗಹನುಮಪ್ಪನಾಯಿಕರಪೌತ್ರರಾದ | ಶರಜಾಹನುಮಪ್ಪನಾಯಿಕರಪುತ್ರರಾದ ಸೀತಾರಾಮಪ್ಪನಾಯಿಕರುಜಾಮದಜ್ಞಾವತ್ಸಗೋತ್ರದ ಆಶ್ವಲಾಯನಸೂತ್ರದರುಕ್ಶಾಖಾಧ್ಯಾಯಿಗಳಾದ ಡಣಾಯಕಕೃಷ್ಣಪ್ಪನಪ್ರಪೌತ್ರನಾದ| ರಾಮಕೃಷ್ಣಪ್ಪನಪೌತ್ರನಾದ | ತಿರುಮಲೈನಪುತ್ರನಾದರಾಯಸದವೆಂಕೈಯಗೆ ಬರಶಿಕೊಟ್ಟಭೂದಾನಶಾಸನದಕ್ರಮವೆಂತೆಂದ್ರೆ ತೀರ್ಥರಾಜಪುರದಲ್ಲಿಸುರಾಲಯವಕಟ್ಟಿಸಿ ಪ್ರತಿಷ್ಠೆ ಮಾಡಿದ ಶ್ರೀವೇಂಕಟೇಶ್ವರಸ್ವಾಮಿದೇವತಾಕಲ್ಲೆಗೆಪ್ರಾಕುನಳಸಂವತ್ಸರದಫಾಲ್ಗುಣಶು ೧೦ ಲ್ಲು ಹಿರೇಕಾತೂರುಗ್ರಾಮದಲ್ಲಿಕೊಟ್ಟಿದ್ದಗ ೩೦೮೦ ವರಹಾನಭೂಮಿಯಿಂದಾಯೇನುಉತ್ಪತ್ಯವಾಹದಿಲ್ಲಾಆಭೂಮಿಯುಅರಮನೆಗೆಕಟ್ಟಿಕೊಂಡುದೇವತಾಸೇವೆಸಾಂಗವಾಗಿನಡವರೀತಿಗೇಬರಲುಸ್ವಾಸ್ಥಿಯಂನಾನೂತನವಾಗಿ ಚೆಂನ್ನಾಂಬಾಪುರದ ಅಗ್ರಹಾರವಮಾಡಿಧೇನೆ ಯಿದಕ್ಕೆಸಹಾಕೊಡಬೇಕೆಂದು ನೀನುಕೇಳಿಕೊಂಡಸಂಮಂಧವೊದಲುಕೊಟ್ಟಿದ್ದದಾನಪತ್ರವಂನೂ ಒಪ್ಪಿಸಿಕೊಂಡು ಪ್ರತಿಯಾಗಿಬಿಟ್ಟಸ್ವಾಸ್ಥಿನಂಮರಾಜ್ಯಕೆಸಲ್ಲುವ ಕಾತೂರುಶೀಮೆಯೊಳಗಣ ಚಿಕ್ಕಕಾತೂರುಸ್ಥಳದ ಗೋವಿಂದಪುರದ ಗ್ರಾಮವಂನೂಯಿಭೂಮಿಯಲ್ಲಿನೂತನವಾಗಿಕಟ್ಟಿದರುದ್ರಾಪ್ಪರಸಹಿತವಾಗಿಅಕ್ಷತೃತೀಯಪುಂಣ್ಯಕಾಲದಲ್ಲಿ ನಂಮಮಾತಾಪಿತೃಗಳಿಗೆ ಅನೇಕಧಂರ್ಮವಾಗಲಿಯಂದು ಸಹಿರಂಣ್ಯೋದಕದಾನಧಾರಾಪೂರ್ವಕದಿಂದರಾಮಾರ್ಪಣಮಾಡಿಕೊಟ್ಟೆವಾಗಿ ಯಿಗ್ರಾಮವಂಡಲಕ್ಕೆ ಕಲ್ಲುವಭೂಮಿಚತುಸ್ಸೀಮೇಗಡೀಗೆಸ್ಥಾಪಿತವಮಾಡಿದಶಿಲಾವಿವರ || ಪೂರ್ವದಿಕ್ಕಿಗೆಯಿಂದಾವರದಬದಹಳ್ಳದಸಮೀಪದಲ್ಲಿ ದಾಳಿಮರದವತ್ತಿನಲ್ಲಿ ನೈರುತ್ಯಮುಖವಾಗಿಕಲ್ಲು ೧ ಬಸವನಹಳ್ಳಿಯಿಹೊಳೇಸಮೀಪದಲ್ಲಿ ಪಶ್ಚಿಮಮುಖವಾಗಿಕಲ್ಲು ೧ ದಕ್ಷಿಣದಿಕ್ಕಿಗೆ ಕೆಂಗೆರೆಹಳ್ಳದಸಮೀಪದಲ್ಲಿವಾಯುವ್ಯಮುಖವಾಗಿಕಲ್ಲು ೧ ಹುಚ್ಚನಕಟ್ಟೆದಕ್ಷಿಣದವಳಗೆರೆಕೋಡಿಯಲ್ಲಿಉತ್ತರಮುಖವಾಗಿಕಲ್ಲು ೧ ಪಶ್ಚಿಮದಿಕ್ಕಿಗೆಜಾರಗಲ್ಲು ಮಠದಮೂಲೇಸರುವಿನ ಹೆದ್ದಾರಿವತ್ತಿನವೊರಡೀಬಳಿಯಣ . ಚೆಲಮರನಸಮೀಪದಲ್ಲಿಪೂರ್ವಮುಖವಾಗಿಕಲ್ಲು ೧ ಬೇಹಿನವೆಂಕಟೇಶನಕಲ್ಲಿನಸಮೀಪದಲ್ಲಿಹಕ್ಕಲಸರುಹಿನವತ್ತಿನಲ್ಲುಪೂರ್ವಮುಖವಾಗಿಕಲ್ಲು ೧ ಉತ್ತರದಿಕ್ಕಿನಚಿಕ್ಕಕಾತೂರುಕೆರೇವಡಲಲ್ಲಿನೇರಲಮರನದೊಡ್ಡಬದುಹಿಮ್ಯಾಲೆಆಗ್ನೇಯಮುಖವಾಗಿ ಕಲ್ಲು ೧ ಯಿಕೆರೇಮೇಲುಗಡೆಯಹಕ್ಕಲಬದುಹಿನಮೂಳೆಯಲ್ಲು | ದಕ್ಷಿಣಮುಖವಾಗಿ ಕಲ್ಲು ೧ ಗ್ರಾಮದಮುಂ

ದೆಉತ್ರಮುಖವಾಗಿಕಲ್ಲು ೧ ಅಂತೂಕಲ್ಲು ೯ ಯಿೂ ವಂಭತ್ತುಶಿಲೆವಳಗಾದಭೂಮಿಗೆ । ಸಲ್ಲುವಗದ್ದೆಬೆದ್ದಲು ತೋಟತುಡಿಕೆಕಾಡಾರಂಭನೀರಾರಂಭಕಡುವಣಕಾಶ್ಯಾವರ್ಗಸುಂಕಸಕಲಸುವರ್ಣಾದಾಯ । ದವಸಾದಾಯ । ಮುಂತಾದಉತ್ಪತ್ಯವಂನೂಆಭೂಮಿವಳಗಿದ್ದನಿಧಿನಿಕ್ಷೇಪಜಲಪಾಶಾಣಅಕ್ಷೀಣಿಆಗಾಮಿ । ಸಿದ್ಧಸಾಧ್ಯಂಗಳೆಂಬಅಷ್ಟಭೋಗತೇಜಸ್ವಾಂಮ್ಯವಂನೂ। ಬೀಳಾದಭೂಮಿಯಲ್ಲಿಆಗಾಮಿಮಾಡಿದವಿಶಿಷ್ಟಫಲಸಂಹನ್ನಿತವಾಗಿಸಂತಾನಪಾರಂಪರ್ಯದಲ್ಲಿ ಆಚಂದ್ರಾರ್ಕಸ್ಥಾಯಿಗಳಾಗಿಸುಖದಿಂಭೋಗಿಸಿಕೊಂಡುಬಹದಕ್ಕೆದೇವತಾಸೇವೆಗೂಅಗ್ರಹಾರದಬ್ರಾಹ್ಮರಿಗೆಸಹಾನಡಸುವದೆಂದುಬರಿಕೊಟ್ಟಭೂದಾನಶ್ಯಾಸನಾ । ಯಿದಕ್ಕೆದೇವತಾಸಾಕ್ಷಿ । ಆದಿತ್ಯಚಂದ್ರಾವನಿಲೋನಲಶ್ಚದ್ಯೌರ್ಭೂಮಿರಾಪೋ । ಹೃದಯಂಯಮಶ್ಚಅಹಶ್ಚರಾತ್ರಿಶ್ಚಉಭೇಚಸಂಧ್ಯೇಧರ್ಮಸ್ಯಜಾನಾತಿನರಸ್ಯವೃತ್ತಂ ॥

24

* ಮತ್ತೊಂದು ಶಾಸನದ ಪ್ರತಿ.

ಶುಭಮಸ್ತು॥ಶುಕ್ಲಾಂಬರಧರಂವಿಷ್ಣುಂಶಶಿವರ್ಣಂಚತುರ್ಭುಜಂಪ್ರಸಂನವದನಂಧ್ಯಾಯೇತ್ಸರ್ವವಿಘ್ನೋಪಶಾಂತಯೇ॥ ಶ್ರೀಮದ್ವೇಂಕಟನಾಥಾಯವೇಣುನಾದವಿನೋದಿನೇವೇದಾ. .ಯವೇದಾಂತವೇದ್ಯಾಯಚನಮೋನಮಃ । ಸೀತಾಲಕ್ಷ್ಮಣಸಂಯುಕ್ತಂಆಂಜನೇಯಾಭಿವಂದಿತಂ ॥ ಕಾರುಣ್ಯಮೂರ್ತಿಕಂಜಾಕ್ಷಂ ॥ ರಾಮಚಂದ್ರಂನಮಾಂಮ್ಯಹಂ । ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇತ್ರೈಲೋಕ್ಯನಗರಾರಂಭಮೂಲಸ್ತಂಭಾಯಶಂಭವೇ । ಹರೇರ್ಲೀಲಾವರಾಹಸ್ಯದಂಷ್ಟ್ರಾದಂಡಸ್ಸಪಾತುವಃ।ಹೇಮಾದ್ರಿಶಿಖರಾಯತ್ರಧಾತ್ರೀಛತ್ರಶ್ರಿಯಂದಧೌ ॥ ಸ್ವಸ್ತಿಶ್ರೀವಿಜಯಾಭ್ಯುದಯಶಾಲಿವಾಹನಶಕವರುಷ ೧೫೭೭ನೇಮಂನ್ಮಥಸಂವತ್ಸರದಮಾರ್ಗಶಿರಬ ೭ ಚಂದ್ರವಾರದಲ್ಲಿಶ್ರೀಮತ್ಸಂತೇಬೆಂನೂರಪೂವಲಿಯಿಂಮಡಿಹನುಮಪ್ಪನಾಯಕರಪೌತ್ರರಾದನಿಚಮದವಣಿಗಹನುಮಪ್ಪನಾಯಕರಪುತ್ರರಾದ ಸರ್ಜಾಹನುಮಪ್ಪನಾಯಕರು ಭಾರದ್ವಾಜಗೋತ್ರದ ಆಶ್ವಲಾಯನಸೂತ್ರದರುಕ್ಶಾಖಾಧ್ಯಾಯಿಗಳಾದಯರಹಳಪಕೋನೇರಿಭಟರಪವುತ್ರರಾದತಿರಮಲಿಭಟರಪುತ್ರರಾದಚಿಕ್ಕಭಟ್ರಗೆ ಪೂರ್ವದತ್ತವಾಗಿನಡದುಬರುತಿದಸ್ವಾಸ್ತೆಗೆಮಾಡಿಕೊಟಜೀರ್ಣೋಧಾರದತಾಂಬ್ರದಶಾಸನದಕ್ರಮವೆಂತೆಂದರೆಸ್ವಸ್ತಿಶ್ರೀವಿಜಯಾಭ್ಯುದಯಶಾಲಿವಾಹನಶಕವರುಷ೧೫೧೧ನೇವಿರೋಧಿಸಂವತ್ಸರದಪುಷ್ಯಶು ೭ ಚಂದ್ರವಾರಮಕರಸಂಕ್ರಾಂತಿಪುಂಣ್ಯಕಾಲದಲ್ಲಿ ಶ್ರೀಮದ್ರಾಜಾಧಿರಾಜರಾಜಪರಮೇಶ್ವರಶ್ರೀವೀರಪ್ರತಾಪಶ್ರೀವೀರವೇಂಕಟಪತಿದೇವಮಹಾರಾಯರುಪೆನುಗುಂಡೆಪಟ್ಣದಲ್ಲಿರತ್ನಸಿಂಹ್ಯಾಸನರೂಢರಾಗಿ ಸಕಲಪೃಥ್ವೀಪಾಲಿಸುವಸಮಯದಲ್ಲಿಅವರದಕ್ಷಣಭುಜಾದಂಡರಾದ ಸಂಥೇಬೆಂನೂರುವುವಲ್ಲಿಕೆಂಗಪ್ಪನಾಯಕರಪುತ್ರರಾದ ಹಿರೇಹನುಮಪ್ಪನಾಯಿಕರ ಸಹೋದರರಾದ ಬಾಲಗಿರಿನಾಯಕರು ಭಾರದ್ವಾಜಗೋತ್ರದಆಶ್ವಲಾಯನಸೂತ್ರದ ರುಕ್ಶಾಖಾಧ್ಯಾಯಿಗಳಾದಯರಗುಳದಕೊಂಡವರುದ್ರಪವುತ್ರರಾದತಿರುಮಲ್ಲಭಟರಪುತ್ರರಾದ ಕೋನೇರಿಭಟರಿಗೆನಂಮರಾಜ್ಯಕೆ ಸಲುವಕಾತೂರುಸೀಮೆಯಲ್ಲಿಅತ್ತಿಮೊಗೆಹೊಂನ್ನಿಭಟರದೇವರಭಟರಿಗೆಸಲುವಉಪಾಧ್ಯಕೆ ಜೋತಿಷ್ಯಕೆಸ್ವಾಸ್ತಿಯಿರಲಾಗಿಅವರವಂಶವುಮುಪ್ರತನಷ್ಟವಾಗಿಹೋದಸಂಮಂಧಆಸ್ವಾಸ್ತೆಮ[ಕ]ರಸಂಕ್ರಾಂತಿಪುಂಣ್ಯಕಾಲದಲ್ಲಿ ಸಹಿರಂಣ್ಯೋದಕ ದಾನಧಾರಾಪೂರ್ವಕವಾಗಿದಾನಾಧಿಕ್ರಯವಿನಿಮಯಯೋಗ್ಯಸರ್ವಮಾಂನ್ಯವಾಗಿ ಶ್ರೀರಾಮಚಂದ್ರದೇವರಪ್ರೀತಿಯಾಗಿ ನಂಮ್ಮಹಿರೇಹನುಮಪ್ಪನಾಯಿಕರಿಗೆಪುಂಣ್ಯಲೋಕವಾಪ್ತಿಆಗಬೇಕೆಂದುರಾಮಾರ್ಪಣವಮಾಡಿಕೊಟ್ಟುದಾನಪಟ್ಟೇನುಬರಸಿಕೊಟ್ಟುಸಾರೋಧಾರವಾಗಿನಡದುಬರುತಿದಲ್ಲಿಆದಾನಪಟ್ಟೆಶಿಥಿಲವಾದಸಮಂಧಶ್ರೀಮತ್ಸಂತೇಬೆಂನೂರುಪೂವಲಿಯಿಂಮಡಿ[ಹನುಮ]ಪ್ಪನಾಯ್ಕರಪವುತ್ರರಾದನಿಚ್ಚಮದವಣಿಗಹನುಮಪ್ಪನಾಯಕರಪುತ್ರರಾದ ಸರ್ಜಾಹನುಪ್ಪನಾಯ್ಕರುಭಾರದ್ವಾಜಗೋತ್ರದ ಆಶ್ವಲಾಯನಸೂತ್ರದರುಕ್ಶಾಖಾಧ್ಯಾಯಿಗಳಾದಯರಗುಳದಕೋನೇರಿಭಟರಪವುತ್ರರಾದತಿರಮಲಭಟ್ರಪುತ್ರರಾದಚಿಕ್ಕಭಟರಿಗೆಮಂ

* ಇದರಲ್ಲಿ ಬಹು ತಪ್ಪುಗಳು ಇವೆ.

ನ್ಮಥಸಂ[ರದ ಮಾರ್ಗಶ್ವಿರಶು ೭ ಚಂದ್ರವಾರದಲ್ಲಿ ಕಲತೀವೀರಭದ್ರದೇವರಸಂನ್ನಿಧಾನದಲ್ಲಿ ಬಸವೇಶ್ವರದೇವರಸಂನ್ನಿಧಾನದಲ್ಲಿ ಬಸವೇಶ್ವರದೇವರಗುಡೀಮುಂದೆ ಮಹಾದಾನಗಳಮಾಡುವಸಮಯದಲ್ಲಿ ಕಾತೂರುಶೀಮೆಯ ಛಳಗಿರಿಕಾತೂರುಸ್ತಳ ೧ ಹಾರಿಕೆರೆಸ್ತಳ೧ ಕುಂಟಿನಮಡುವಿನಸ್ತಳ ೧ ಅಮ್ರುತಾಪುರದಸ್ತಳ೧ ಕುಡ್ಲೂರುಸ್ತಳ ೧ ಕಾಮನದುರ್ಗಸ್ತಳ ೧ ಸಹಾಲಿಂಗದಹಳ್ಳಿಸ್ತಳ ೧ ದಾರೆನಹಳ್ಳಿಸ್ತಳ ೧ ತರೀಕೆರೀಸ್ತಳ ೧ ಚಿಕಾತೂರುಸ್ತಳ ೧ ದುಗುಲಾಪುರಸ್ತಳ ೧ ಅಂತು ಸ್ತಳ ೧೦ಕ್ಕೆ ದಿಗ್ವಿವರಪೂರ್ವದಿಕ್ಕಿಗೆ ಕುಡ್ಲೂರುರಾಚೋಗೆರೆಮುಂದಿನ ಕೋಡಿಯಮುಂದಣ ಆಲದಮರದಬದಱು ದಕ್ಷಿಣದಿಕ್ಕಿಗೆ ಕಾಮದುರ್ಗಕೆಪೆಂಕಣನ್ವೆಯದಹಳ್ಳ ಪಶ್ಚಿಮದಿಕ್ಕಿಗೆ ಹಲ್ಸೂರುಪಡುವಣದ್ರುಷ್ಟಗ್ನಿಹಳ್ಳ ಉತ್ರದಿಕ್ಕಿಗೆಗಿಣಿರಾಮೇನಗುಡಕ್ಕೆ ಚೆಂಕಣಶಿರನಕಟಿಸರುಹುಯಿೂಚೆತುಶೀಮೆಮಧ್ಯದಲ್ಲಿ ಯೀಕಾತೂರುಶೀಮೆಸ್ತಳ ೧೦ಕೆ ಸಲ್ಲುಗ್ರಾಮಾನುಗ್ರಾಮಗಳಲ್ಲಿಪ್ರಪಾದಿಕ್ಕೆ ಜ್ಯೋತಿಪ್ಯಕ್ಕೆಸಲ್ಲುವಗದೆತೋಟಹೊಲಮನೆಮುಂತಾದಭೂಮಿವಳಗೆಯಿದನಿಧಿನಿಕ್ಷೇಪಜಲಪಾಷಾಣಅಕ್ಷೀಣಿ ಆಗಾಮಿಸಿದ್ಧಸಾಧ್ಯಂಗಳೆಂಬ ಅಷ್ಟಭೋಗಂಗಳು ತೇಜಸಾಂಮ್ಯಶುಭಸೋಭನಮುಂಜಿಮುದವೆಚತುಶಾಖಶೋಡಶಕರ್ಮಂಗಳಲ್ಲಿಪುಣ್ಯಾವಾಚನೆನಾಂದಿಗ್ರಹಾರಾಧನೆಮುಹೂರ್ತಬ್ರಹ್ಮದಾಯಮುಂತಾದಸಲುವಸಾಂಮ್ಯಮಂನ್ನು ಸರ್ವಮಾನ್ಯವಾಗಿನಿಮ್ಮಪುತ್ರಪೌತ್ರಪಾರಂಪರ್ಯವಾಗಿ ಆಚಂದ್ರಾರ್ಕಸ್ತಾಯಿಗಳಾಗಿ ಅನುಭವಿಸಿಕೊಂಡುಸುಖದಲ್ಲಿಹನೆಂದುನಂಮಹಿರೇರುಗಳಿಗೆ ಅಕ್ಷಯಪುಣ್ಯಲೋಕಪ್ರಾಪ್ತಿ ಆಗಬೇಕಾಗಿ ರಾಮಾರ್ಪಣವಾಗಿಕೊಡಿಸಿ ಬರಸಿಕೊಟಜೀರ್ಣೋಧ್ಧಾರದತಾಂಬ್ರದಧರ್ಮಶಾಸನದಲ್ಲಿಖಿತ್ತ್ವಯಿೂದಾನಕ್ಕೆಫಲಗ್ರಂಥಃ|| ದಾನಪಾಲನಯೋರ್ಮಧ್ಯೇದಾನಾಚ್ಛ್ರೇಯೋನುಪಾಲನಂದಾನಾಸ್ವರ್ಗಮವಾಪ್ನೋತಿಪಾಲನಾದಚ್ಯುತಂಪದಂ || ೧ || ಸ್ವದತ್ತಂದ್ವಿಗುಣಂಪುಣ್ಯಂಪರದಾತ್ತಾನುಪಾಲನಂ | ಪರದತ್ತಾಪಹರೇಣಸ್ವದತ್ತಂನಿಷ್ಪಲಂಭವೇತ್ ||೨|| ಸ್ವದತ್ತಂವಾಪರದತ್ತಾಂವಾಯೋಹರೇತಿವಸುಂಧರಶತವರುಷಸಹಸ್ರಾಣಿವಿಷ್ಟಾಯಾಂಜಾಯತೇಕ್ರಿಮಿ ||೩|| ಸ್ವದತ್ತಾಪುತ್ರಿಕಾಧಾತ್ರೀಪಿತ್ರುದತ್ತಾಸಹೋದರೀಪರದತ್ತಾಸ್ವಯಂಮಾತಾದತ್ತಾಭೂಮಿಂಪರಿತ್ಯಜೇತ್ ||೪|| ಯೆಕ್ಯೆವಭಗಿನೀಲೋಕೇಸರ್ವೇಷಾಮೇವಭೂಭುಜಾಂನಭೋಜ್ಯಾನಕರಗ್ರಾಹ್ಯಾವಿಪ್ರದತ್ತಾವಸುಂಧರಾ||೫||ಇಂದಃಪ್ರುಚ್ಛತಿಚಾಂಡಾಲೀಂಕಿಮಿದಂಪಚತೇತ್ವಯಾಶ್ವಮಾಂಸಂಸುರಯಾಸಿಕ್ತಂಕಪಾಲೇನಚಿತಾಗ್ನಿನಾ ||೬|| ದೇವಬ್ರಾಹ್ಮಣವಿತ್ತಾನಿಬಲಾದಪಹರಂತಿಯೇತೇಷಾಂಪಾದರಜೋಭೀತ್ಯಾಚರ್ಮಣಾಪಿಹಿತಂಮಯಾ ನಷ್ಟಂಕುಲಂಭಿನ್ನತಟಾಕಕೂಪಂ ಪ್ರಭ್ರಷ್ಟರಾಜ್ಯಂಶರಣಾಗತಂಚ | ಗೋಬ್ರಾಹ್ಮಣಂದೇವಗೃಹಾಲಯಂಚಯಉದ್ಧರೇತ್ಪೂರ್ವಶತಾಧಿಕಂಫಲಂ || ಮದ್ವಂಶಜಾಪರಮಹೀಪತಿವಂಸಜಾವಾಯೇವೈನ್ರುಪಾಸತತಮುಜ್ವಲಧರ್ಮಚಿತ್ತಾಃ | ಮದ್ಧರ್ಮಮೇವಸತತಂಪಾರಿಪಾಲಯಂತಿ | ತತ್ಪಾದುಕದ್ವಯಮಹಂಶಿರಸಾವಹಾಮಿ ಶ್ರೀರಾಮಚಂದ್ರ ||

25

ಲಿಂಗದಹಳ್ಳಿ ಹೋಬಳಿ ಲಿಂಗದಹಳ್ಳಿ ಗ್ರಾಮದಲ್ಲಿ ವೀರಭದ್ರಗುಡೀ ಬಳಿ ನಟ್ಟ ೧ನೇ ವೀರಕಲ್ಲು.

ಪ್ರಮಾಣ 2′ × 2′ 3″.

1 ಶ್ರೀಖರಸಂವತ್ಸರದಭಾದ್ರಪದಸು ೧ ಆ....................೩
2 ...ಯಣದೇವನು.................. ....ಕಾದಿ...
3 ವನ...ತಂಬೋವನಮಗಮಸಣಸುಬೊಮ್ಮಯನಹಳ್ಳಿಯಕಾದಿಆಬ
4 ಮಿಚಯನಾಯ್ಕನುತಂಮತಂ. .ಯನಿಱಿದುಸ್ವರ್ಗಸ್ತನಾದನು

26

ಅದೇ ಹೋಬಳಿ ಕಲ್ಲತ್ತಿಪುರ ಗ್ರಾಮದ ವೀರಭದ್ರ ದೇವಾಲಯದ ಸುತ್ತುಮುತ್ತಲೂ ಯಿರುವ ಬಂಡೆಗಳ ಮೇಲೆ ಬರದಿರುವ ಶಾಸನಗಳು 26—35.

ಗ್ರಂಥ ಮತ್ತು ಅರವಾಕ್ಷರ.

1ಕುಮಾರಶುವಮಿ | 2ಶೇವೈ

27

1ಶ್ರೀಚೆನ್ದಂನಂಅಕ್ಕಸಾಲಿ | 2ಬಸವಾಮಿನ್ದಂ ||

28

1ಧನುರಮುಸ್ಸವಸ್ಸುಮಿನ್ದಸ

29

1ಶ್ರೀಸನ್ತರಶ್ರೀಪನಿಧಿ | 2ಮಿನ್ದುಪ್ರೋದಮು

30

1ಶ್ರೀಪಿಳುಕ್ಕುಗಳಾದಿತ್ಯ

31

1ಶ್ರೀದುಗ್ಗಮರರ
2ಪ್ರೋಣತ್ತರವಿಜ್ಜಧರರ | 3ದೇಗುಲ

32

1ಶ್ರೀದುಗ್ಗಮರರಸ
2...ಣಿವಿಜಧ | 3ರನದೇಗುಲ

33

1ಶ್ರೀಬಾಯುರಕಿತ್ತಣ್ಣಾನ | 2ಪರದರಎಬ್ರು

34

ನಾಗರಾಕ್ಷರ.

1ಶ್ರೀಮಾನುವಿಕ್ರಮಾದಿತ್ಯದೇವ	3ಣೆಢಿರುಯು . . ಸೇವೆದೇ
2ರಜರುದ್ರ . . ಮಯುಹಳರ	4ಗುಲಂ

35

1ಶ್ರೀನಿಜರುದ್ರಪಾದನ	2ಲಿಂಗಂಮಾಡಿದೊನ್

36

ಅದೇ ಹೋಬಳಿ ನಂದೀ ಗ್ರಾಮದಲ್ಲಿರುವ ಮಲ್ಲೇಶ್ವರ ದೇವಾಲಯದ ದಕ್ಷಿಣಕಡೆ ನೆಟ್ಟ ಕಲ್ಲಿನಲ್ಲಿ.

ಪ್ರಮಾಣ 6′ × 3′.

(ಮೇಲ್ಭಾಗ ಹೋಗಿದೆ.)

1 ....ಹೊಯ್ಸಳರಾಜ್ಯ

2 ....ನಾಜ್ಞೋಮೀಜೀದಿಶಾ......

3 ....ಕರಂಶ್ರೀವಿಷ್ಣುಭೂಪಾ......

4 ....ವಗ್ಗೆವನೆವಧೂತಿಳಕೆಯೆ......

5 ....ವಿನಪುತ್ರಕನೆಂಡಡೆಬಣ್ಣಿ......

6 ....ಕರಂ ‖ ಆತನಗ್ರತನೂ........

7 ....ಳಧೀರಂಡಿಗಿಭೋನ್ನತಂಭ:ಜಬಳಾವ...

8 ....ಯು:ಕೆ.ತ್ರೆಯಾಂಲೀಲೆಯಾಂತಳೆದಂಸು...

9 ....ತ್ರಚರಿತ್ರಪಾಳನಪರಶ್ರೀರಾಮಸಂಪ......

10 ....ಪ್ರಿಥ್ವೀಭುಜಾ । ಕೀಲಾಲಾಗವಪಾನಮತ್ತವಿನ...

11 ....ಯ್ಯರ್ನಿಳಯೇಬಲ್ಲಾಳಪೃಥ್ವೀಭೃತೇ ‖ ಸ್ವಸ್ತಿಸಮ

12 ....ಶ್ರೀಮದ್ವಾರಾವತೀಪುರಪರಾಧೀಶ್ವರ.........

13 ....ಕ್ತಚೂಡಾಮ.ಣಿಮಲೆಪರೊಳುಗಂಡಗಂಡಪ್ರಚಂಡ

14 ....ಪರಿಪೂರ್ಣ್ಣಾರ್ಣ್ನವಂಸತ್ಯರಾಧೇಯಂಕಟಕಭೈರವಂಚೋ

15 ....ಮಂಡಳಿಕಕುರುಂಗಕಂಠೀರವವೈರಿಮಂಡಳಿಕಚಾತುರ್ಬ್ಬಳಖಾಂ

16 ....ಶ್ರೀಪುರುಷೋತ್ತಮದೇವರಶ್ರೀಪಾದಾಬ್ಜಭ್ರಿಂಗಸಾಹಸೋತ್ತುಂಗ

17 ....ಅನೇಕನಾಮಾದಿಪ್ರಶಸ್ತಿಸಹಿತಂಶ್ರೀಮನ್ಮಹಾಮಂಡಳೇಶ್ವರಂ

18 ....ವಿಷ್ಣುವರ್ದ್ಧನಪ್ರತಾಪಕೊಂಗುನಂಗಲಿತಳಕಾಡುಬನವಾಸೆಹಾನುಂಗಲುಗೊಂಡಭುಜಬಳ

19 ....ಶನಿವಾರಸಿದ್ಧಿಚಲದಂಕರಾಮನಸಹಾಯಶೂರನಿಸ್ಸಂಕಪ್ರತಾಪಹೊಯ್ಸಳವಿ

20 . . . . ರೆಸಮುದ್ರದನೆಲೆವೀಡಿನೊಳ್ ವಿಜಯರಾಜ್ಯಮುತ್ತರೋತ್ತರಪ್ರವರ್ದ್ಧಮಾನಮಾಚಂದ್ರಾ

21 . . . . ಉತ್ತಮಿರೆತತ್ಪಾದಪದ್ಮೋಪಜೀವಿ ‖ ಸಂಧಿಯಮಾರಗೌಂಡನಸುಪುತ್ರರಪ್ಪಜಕ್ಕಗೌಂಡನುಂಕೆ

22 . . . . . . ನುಂಸಾಮಂತಮಲ್ಲಗೌಂಡಸಿತಗರರಗಂಡಸಾವ.ತಗಣಿಅರಮನೆಗೊಂಡೆಯರಗಂಡತಂಮಯ್ಯನಪೆಸರಲಿಲಿಂ

23 . . . ಪ್ಟೆಯುಂವಡಾಡಿ ಶಕವರ್ಷ್ಷದ ೧೦೭೯ನೆಯ ಹೇಮಳಂಬಿಸಂವತ್ಸರದಉತ್ತರಾಯಣಸಂಕ್ರಾಂತಿವ್ಯತೀಪಾತಂ

24 . . . . ಗ್ರಹಣಸೋಮವಾರದಂದು ಶ್ರೀಮಾರೇಶ್ವರದೇವರಂಗಭೋಗಕಂ ತ್ರಿಕಾಲಪೂಜಾನಿವೇದ್ಯಕ್ಕಂತೆ

ಪೋಧ

25 . . . . ರದಾನಕ್ಕಂಮೊಂದುಸ್ವಸ್ತಿಯಮನಿಯಮಸ್ವಾಧ್ಯಾಯಧ್ಯಾನಧಾರಣಮೋನಾನುಷ್ಠಾನಜಪಸಮಾ

ಧಿಶೀಲಗುಣಾಸಂ

26 . . . . . . ತಱಿಯಕೆಱೆಯತತ್ಪುರುಷಪಂಡಿತರಸುಪುತ್ರನಪ್ಪಅಮ್ರುತರಾಸಿಗುರುಗಳಕಾಲಂಕರ್ಚ್ಚಿ ಧಾರಾಪೂರ್ವ್ವ

27 . . . ಡಿಬಿಟ್ಟದತ್ತಿಗದ್ದೆಯ.ಕೆಱೆಯ ಕೆಳಗೆಂಗನಗಳಿಯಲಿಗದ್ದೆಹತ್ತುಕಂಭಕೊಡದಕೆಱೆಯಕೆಳಗೆಕೋಂಟವಸಲು

ಕಂಭ

28 . . ದಂಬಡಗಲುಬಿದಿರಕಟ್ಟದಬಡಗಣಕೋಡಿಯಲ್ಲಿನೂಱತಲೆಕಂಭ ೨೦ ದೇವರಪೂರ್ವ್ವಾಭಿಮುಖದವೊಳಗೆಱೆಯೊಳ್

29 . . ನಗಳೆಯಲ್ಲಿಮತ್ತರೊಂದು ‖ ಮಾರೇಶ್ವರದೇವರಪುರವಾರ್ಗ್ಗದಕೆಱೆದೇವರಂಗಭೋಗಕ್ಕೆ ಗಾಣವೊಂದುದೇವರಿಗೆಸ

ರ್ವ್ವನಮ

30ಸಿವಾಯಬೋವಕ್ಕಳುಮಾರೇಶ್ವರದೇವರಿಗೆಬಿಟ್ಟರುಸೆಡೆಯಹಿಟ್ಟಪಂನ್ನಾಯದಹೆಗ್ಗಡೆಗಳುವಿಟ್ಟಾಯಯೆಲೆಯಹೇಱಿಂ

ಗೆನೆಱು

31ಹೊಱೆಗಯ್ವತ್ತುಸ್ವದತ್ತಂಪರದತ್ತಂವಾ ಯೋಹರೇತವಸುಂಧರಾಂ । ಷಷ್ಟಿವರ್ಷಸಹಸ್ರಾಣಿವಿಷ್ಟಾಯಾಂಜಾಯತೆ

ಕ್ರಿಮಿಃ ‖

37

ಅದೇ ಗ್ರಾಮದ ಸಿದ್ಧೇಶ್ವರ ದೇವಾಲಯದ ಪ್ರಾಕಾರದಲ್ಲಿ ದಕ್ಷಿಣಕಡೆ ನೆಟ್ಟ ಕಲ್ಲಿನಲ್ಲಿ.

1ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇತ್ರೈಲೋಕ್ಯನಗರಾರಂಭಮೂ

2ಲಸ್ತಂಭಾಯಶಂಭವೇ । ಯುಗನಾಮರ್ತ್ಥ್ಯದೆಮುನ್ನೆನ್ರಿಗನಹ.ಷ

3 . . . . ವಿನಯಾ

4ದಿತ್ಯ ‖ ಮಲೆಯರಸು . . ಹಳಲಾತಲೆಯೆಂ(ತ್ರೆ)ತಡೆಯಾತ್ತಱೆಪರ್ವಾದಾಂಬು

5ಜಮಂತಲೆಯೊ . . ತ . . . . ಭ.ಜಬಳಮಂಪೆಸರ್ವ್ವ . . . . ವಿನೆಯಾದಿತ್ಯ ‖

6ಅವಿನೆಯಾದಿತ್ಯಂಗಂ . . . . ವನವಾಸಿಯಬ್ಬರಸಿಗಮಖಿಳೋರ್ವ್ವೀಶನುದಯಂಗೆ

7ಯ್ದಂಶ್ರೀವರಪದಪದ್ಮಭ್ರಿಂಗನೆಱೆಯಂಗನ್ರಿಪ ‖ ಎಱಗಡಪಂದಿರತ . . . . . .

8ಸಿಪನೆಱೆಗಿಪನರಾತಿನ್ರಿಪ . . ನೆಱಗಿಪಬಲ್ಪಿಂದಂತ . . ನೆಱೆಯಂಗನವ

9ಳವಿಜಯಶ್ರೀಯುಂ ‖ ಆನರಪತಿಗಂಭೋಧಿಗನೂನ . . . . . . ಯೆನಿಸಿಪ್ಪಂತ .

10ನಯೆನಿಪ್ಪೇಚಲದೇವಿಮನೋನಯನಪ್ರೀತಿಯಿಂನೊಗಯಿಸಿದಳು ‖ ಉಭಯಕು

11ಲಶುದ್ಧೆ . . . . . . ಸುಭಲಕ್ಷಣೆಗಂಸುಚರಿತೆಚರಿತ್ರ . . . . . ಪ್ರಭುಗಂವ . . . . . .

12ರ . . . . ಸುಭಗರ್ಬ್ಬಲ್ಲಾಳವಿಷ್ಣುವಿನಯಾದಿತ್ಯರ್ ‖ . . . . . ಹೊಯ್ಸಳರಾಜ್ಯಲಕ್ಷ್ಮಿ

13ರೊದವ ತೋಳ್ವಲ್ಪಿಳ್ದನಿಂತಾತಾತನ್ನುದಯಂ.............................
14......ಚಕ್ರಮನೋತ್ತಿಕೊಂಡುತಳಕಾಡಂಗಂಗರಾ...........ದಂಯದು
15ವಂಶವರ್ದ್ಧನಕರಂಶ್ರೀವಿಷ್ಣುಭೂಪಾಳಕಂ || ಆತ...............ಕುಲಜನೆ
16ಯಾದವಾನ್ವಯಶಿಖಾಮಣಿ ....ಯೆನಿಪ್ಪಲಕ್ಷ್ಮಿ
17ಯುಮುಗಂಕೆಡುಚೆಲ್ವೆನೆಲೋಕವೆಲ್ಲಮುಂಸಲೆನಿಲೆಕಾವವಿಷ್ಣುವಿನಪುತ್ರಕನೆಂದ
18ಡೆಬಣ್ಣಿ ಸಲ್ಕೆಭೂವಳಯದೊಳಾಪ್ಪ......ನ್ರಿಪಾಳಕನಂನಿರಂತರ .
19..ನಗ್ರತನೂಜಂ || ವಿಳಸ..........................

(ಮುಂದೆ ಅಕ್ಷರಗಳು ಕಾಣುವದಿಲ್ಲ.)

38

ಅದೇ ದೇವಾಲಯದ ಪ್ರಾಕಾರದಲ್ಲಿ ಮಹಾದ್ವಾರದ ಬಳಿ ನೆಟ್ಟ ಕಲ್ಲಿನಲ್ಲಿ.

ಪ್ರಮಾಣ 3′ × 1′.

1ತಾರಣಸಂವತ್ಸರಕ್ಕೆಸಲುವಪೌರ್ಥಿವಸಂ
2ವತ್ಸರದಭಾದ್ರಪದ ಬ ೧೦ಲುಶ್ರೀಮತುಕೃ
3ಷ್ಣಪ್ಪನಾಯ[ಕ]ಅಯ್ಯನವರಕಾರ್ಯ್ಯಕ್ಕೆಕರ್ತ್ತ
4ರಕಾಮರಸವೊಡೆಯರುನಂದಿಯಸಿ
5ದ್ದೇಶ್ವರಸ್ವಾನಿಕರಿಗೆಕೊಟ್ಟಭಾಷಾಪತ್ರದಪ್ರೋ
6ಲೆಯೆಕ್ರಮ ವೆಂತೆಂದರೆಸಿದ್ದೇಶ್ವರಗೆಗಣಾ
7ಚಾರಿಗಳುತೆಗಮುಕೊಂ . ಗ ೧ ಣವನೂ
8ನಾನುಕೃಷ್ಣಪ್ಪನಾಯುಕಅಯ್ಯನವರಿಗೆಧರ್ಮ್ಮ
9ವಾಗಬೇಕುಯೆಂದುಕೊಟ್ಟೆಉಯಿದಕ್ಕೆಆರೋ
10ಬ್ಬರುನಾನುಮೊದಲುಮುಂದೆಬರುವನುಕಡೆ
11ಆರೊಬ್ಬರುಅಳಿಪಿದರುಕೃಷ್ಣಪ್ಪನಾಯಕಅ
12ಯ್ಯನವರಪಾದಕ್ಕೆತಪ್ಪಿದರುತಂಮತಂದೆತಾ
13ಯಿಗೆತಪ್ಪಿದರುತಂಮತಂದೆತಾಯಿಗೋಉ..
14..ರನುವಾರಣಾಸಿಯಲ್ಲಿಕೊಂದಪಾಪಕ್ಕೆಹೋ
15ಹರು ಯಿಹದಿನ್ನೈಯಿದುಹಣವಿಗೆಕೃಷ್ಣಪನಾ
16ಯಕಅಯ್ಯನವರಹೆಸರಹೇಳಿವೊಪ್ಪತ್ತಿನ
17ನೈವೇದ್ಯವನುನಡುಪಮರ್ಯ್ಯಾದೆಯಲ್ಲಿ
18ಕಟುಮಾಡಿಬಿಟ್ಟೆಉಯಿಂತೊಪ್ಪದ
19ಕ್ಕೆಕೃಷ್ಣಪ್ಪನಾಯಕಅಯ್ಯನವರಸೇನ
20ಬೋವಲಕ್ಷ್ಮಣನಬಾರಹ
21ಯಿವೋಲೆಯನುಕೊಟ್ಟಕಾಮರಾಜ
22ಗಳವೊಪ್ಪಕಾಮರಾಜ 1
23ನಂದಿಯ........
24ವೋಜಸಿದ್ದಯ್ಯನಬರಹ

39

ಅದೇ ಹೋಬಳಿ ಹುಲಿತಿಮ್ಮಾಪುರಕ್ಕೆ ವಾಯುವ್ಯ ಮೂಲೆಯಲ್ಲಿ ನಂಜುಂಡನ ರಂಗನ ಹೊಲದಲ್ಲಿ ನೆಟ್ಟಿರುವ ಕಲ್ಲು.

ಪ್ರಮಾಣ 3′ 6″ × 1′ 8″.

1ಶಾಲಿವಾಹನಶಕವರುಷ
2ಸ ೧೫೧೦೩ಆನಂದಸಂ
3ವತ್ಸರದಚೈಯಿತ್ರಶು ೧೦ ಲುಕಾ
4ಮನದುರ್ಗದಲಿಚೆನಿರಾಮ
5ಸ್ವಾಮಿಸೇವೆಗೆಸಂಥೇಬೆಂಸೂ
6ರಸೀತಾರಾಮಪ್ಪನಾಯಕರೂ
7ಯಿತಿಮ್ಮಾಪುರದಗ್ರಾಮ
8ವನೂಕೊಟ್ಟನೂಯೆಂದುಹಾ

9ಶಿಸಿಕೊಟ್ಟಶಿಲಾಶಾಸನ
10ಯಿದಕ್ಕೆಅಳಪಿದವರುಸ್ವ
11ದತ್ತಾಂಪುತ್ರಿಕಾಧಾತ್ರೀ
12ಪಿತೃ[ದತ್ತಾಂಸ]ಹೋದ
13ರೀಪರದತ್ತಾಂಭವೇನ್ಮಾತಾ
14ದತ್ತಾಂಭೂಮಿಂಪರಿತ್ಯಜೇತ್

40

ಅದೇ ಹೋಬಳಿ ಉಡುವ ಗ್ರಾಮದ ಪೂರ್ವಕಡೆ ೬೧ನೇ ನಂಬರ್ ಜಮೀನಿನಲ್ಲಿ ಬಿದ್ದಿರುವ ಕಲ್ಲು.

1...ವಾಲ
2 . ವಾಪೂರ್ಪ್ವರ್ಣ
3ಸಾನ್ಯದ ೬ ಕ
4ಲಿನಗಡಿ
5ದೇವರಭೂಮಿ

41

ಅಮೃತಾಪುರದ ಹೋಬಳಿ ಅಮೃತಾಪುರದ ಬಸವನಗುಡೀಮುಂದೆ ನೆಟ್ಟ ಕಲ್ಲಿನಲ್ಲಿ.

ಪ್ರಮಾಣ 3′ × 2′.

1ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇತ್ರೈಲೋಕ್ಯನಗರಾರಂಭ
2ಮೂಲಸ್ತಂಭಾಯಶಂಭವೇ ‖ ಸ್ವಸ್ತಿಸಮಸ್ತವಿಜಯಾಭ್ಯುದಯಶಾಲಿವಾಹನಶಕವರು
3ಷ ೧೪೬೯ನೆಯಪ್ಲವಂಗಸಂವತ್ಸರದಮಾರ್ಗಶಿರಶುಧ ೧೦ ಭೌವ್ಯವಾರದಲುಶ್ರೀಮ
4ನ್ಮಹಾರಾಜಾಧಿರಾಜರಾಜಪರಮೇಶ್ವರಶ್ರೀವೀರಸದಾಶಿ
5ವರಾಯಮಹಾರಾಯರಕಾರ್ಯ್ಯಕೆಕರ್ತ್ತರಾದಶ್ರೀತಿರಪುತಿರಾಮರಾಜಅಯ್ಯನವ
6ಗೆಪುಂಣ್ಯವಾಗಬೇಕೆಂದುಸ ......ಗುಂಮಡಂಣಅಯ್ಯನವರುನಂಮ
7ಅಮರನಾಯಕತನಕೆ ....ಯನಅಮ್ರಿತೇಶ್ವರದೇವರ
8 ....ಯುಂಕಟ್ಟೆ.......ಸುಂ
9ಕಪಸ್ವಾಮ್ಯವನುಅಮ್ರಿತೇಶ್ವರದೇವರನಂದಾದೀವಿಗೆಗೆರಾಮರಾಜಅಯ್ಯನವ
10ರಿಗೆಪುಂಣ್ಯವಾಗಬೇಕೆಂದು ....ಧರ್ಮ್ಮವನು
11ನಡಿಸಿದವಂಗೆ ....ಯಿದಕ್ಕೆಅಳಪಿದವರುತಾಯಿತಂಡೆಗೆ
12 ....ಪಾಪಕ್ಕೆಹೋಹ
13 ....ಅಳಪಿದವರಿಗೆಪಸಿಕೆಈಲವೆಂದುಆ
14ಚಂದ್ರಾರ್ಕಸ್ಥಾಯಿಯಾಗಿ ......ಸ್ವದತ್ತಂದ್ವಿಗುಣಂಪುಣ್ಯಂಪರದ
15ತ್ತಾನುಪಾಲನಂ ....ಪರ್ವಾಗದತ್ತಂಮ
16ನೋದತ್ತಂವಾಚಾದತ್ತಂದಿನೇದಿನೇಷಷ್ಟಿವರ್ಷಸಹಸ್ರಾಣಿವಿಷ್ಠಾಯಾಂಜಾಯತೇ
17ಕ್ರಿಮಿ ......ಬರಹ ಶ್ರೀ ಶ್ರೀ

42

ಅದೇ ಗ್ರಾಮದಲ್ಲಿ ಅಮೃತೇಶ್ವರ ದೇವಾಲಯದ ಪೂಳಬಾಗಲಿನ ಉತ್ತರಕಡೆ ನೆಟ್ಟ ಕಲ್ಲಿನಲ್ಲಿ.

ಪ್ರಮಾಣ 4′ 6″ × 2′.

1ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇತ್ರೈಲೋಕ್ಯನಗರಾರಂಭ
2ಮೂಲಸ್ತಂಭಾಯಶಂಭವೇ ‖ ವೃ ‖ ಸಳನೆಂಬಂಶಕಕಪ್ರಸಿದ್ಧಪುರದೋಳ್

3ಪಾಸನ್ತಿಕಾದೇವಿಯಂತಳೆದಾರಾಧಿಸುವಾಗಳುತ್ತರಳನೇತ್ರಂಘೋರವಕ್ತ್ರಂವಿಶ್ವಂ
4ಖಳಗಾತ್ರಂಪುಲಿಪಾಯೆಕಂಡುಮುನಿನಾಥಂಕುಂಚಮಂಕೊಟ್ಟುಪೊಯ್ಸಳಯೆಂ
5ದಂಬಳಕಾಯ್ತುಪೊಯ್ಸಳವೆಸತ್ತಾರ್ಗಂಯಾದವೋರ್ಬ್ಬೀಸರೊಳ್ ‖ ಅಲಗಿಂಸಿಂಗಮನಿಱಿದಸಕಲಿ
6ತನಮಂನಗುವತೆಱದೆಮೆಱವುದುಸಳೆಯಿಂಪುಲಿವೊಯ್ದ್ದಕುಱುಪುಪೊಯ್ಸಳ
7ಕುಲತಿಲಕನಮತ್ತಗಜಪಟಕೆಯದೊಳೀಗಳು ‖ ಅನಿತೊಂದುಂನತಿವೆತ್ತಪೊಯ್ಸಳಕುಳಂಪ್ರೊ
8ವರ್ವ್ವಾದ್ರಿಯಂಪೋಲ್ವಿನಂವಿನಯಾದಿತ್ಯನೃಪಾಳನುದ್ಭವಿಸಿದಂಭೂಲೋಕದಾದಿತ್ಯನೆಂಬಿನೆಗಂಕ
9ಬ್ಬಿಲೆಕೂಡೆಕಣ್ಗೆಕವಿದತ್ತನ್ಯಾವನೀಶರ್ಗ್ಗೆತ್ತೊಟ್ಟೆನೆಕೈಕೊಂಡುದಲರ್ಕ್ಕೆಯಂಕುವಳಿಯಂವತ್ತಾ
10ತನಿಂಕೌತ್ಕಂ ‖ ಕೆಳೆನಡೆಯಿಂಕಳಹಂಸೆಗೆಕೆಳೆನುಡಿಯಿಂಕೋಕಿಳಕ್ಕೆಸೋಗೆಗೆಮುಡಿಯಿಂಕೆಳೆಕೆ...
11ಬರಸಿಯೆತತ್ಕುಳವಧುವಾದಳುತದೀಯಸುತನೆಱೆಯಂಗಂ ‖ ವೃ ‖ ಚಲದೆಱೆಯಂಗೆಬಾಗದ
12ಱೆಯಂಗೆಜಸಕ್ಕೆಱೆಯಂಗೆವಿಕ್ಕದೋರ್ವ್ವಲದೆಱೆಯಂಗೆವೀರದೆಱೆಯಂಗೆಕುಲೋಂನತಿ...
13ವೇಚಲೆಯೆಱೆಯಂಗೆಕೀರ್ತ್ತಿಯೆಱೆಯಂಗೆಱೆಯಂಗನೃಪಂಗೆನಂದನಂಜಲಧಿಪರೀತಭೂವಳ...
14ನನಂಕವವಿಷ್ಣುವರ್ದ್ಧನಂ ‖ ಬಿಟ್ಟಿಗನಾಹವಾಂಗಣಕೆಜೆಟ್ಟಿಗನೆತ್ತಿದೊಡತ್ತಕಂಚಿಬೆಂಗೊಟ್ಟುದುಕೊಂಗುಕೂ
15ಡೆನೆಲೆವಿಟ್ಟುದುಮಿಕ್ಕವಿರಾಟಕೋಟೆಕೂಗಿಟ್ಟುದುಕೋಯತೂರ್ಕ್ಕೆದಱಿಕೆಟ್ಟುದುರೂಢಿಯ
16ಚಕ್ರಗೊಟ್ಟವಿಂಬಿಟ್ಟುದುಕೆಯ್ದುವಿಕ್ಕಿಕಡಲೊಳ್ಪಡಲಿಟ್ಟುದುಸಪ್ತಕೊಂಕಣಂ ‖ ದೇವಿವೆಸರೆಸೆವಲಕು
17ಮಾದೇವಿಗನಾವಿಷ್ಣುವರ್ದ್ಧನಂಗಂತನಯಂಶ್ರೀವಿಜಯನಾರಸಿಂಹಮಹೀವಲ್ಲಭನವನವೀರ
18ಮುಪಮಾತೀತಂ ‖ ನರಸಿಂಹಂನರಸಿಂಹನನ್ತೆಮುನಿಸಿಂಮಾಪ್ರಾನ್ತವೀರಾರಿಭೂಪರನಣ್ಮುಟ್ಟೆ
19ನೊಳಂತುಕಂಡೊಡೆಬಟಿಕ್ಕಂಮಂಮಪ್ರೋದ್ದ್ರಿಕ್ತಪೇರುರಮಂಥೊರ್ಕ್ಕನೆಕುತ್ತಿಚಕ್ಕನೆಭುಜದ್ವಂದ್ವಂಗಳಿಂದೆ
20ತ್ತಿಬಲ್ಗರುಳಂಕೋದೆಳಲಿಕ್ಕಿಬೀರಸಿರಿಗೆತ್ತಂತೋರಣಂಗಟ್ಟನೇ ‖ ಪಟ್ಟಮಹಾದೇವಿಗವಾಕಟ್ಟಣಕದ
21ಕಲಿಯೆನಿಪ್ಪನರಸಿಂಹಂಗಂಪುಟ್ಟಿದನಾಹವಜಯದೊಡವುಟ್ಟುವಿನಂರಾಯಮನ್ಮಥಂಬಲ್ಲಾಳಂ ‖
22ವೃ ‖ ಕುಂಡಾಳಂಮದಮುಳ್ಳಚೋಳನಳವಿಂದಾಸಿಂಹಳಸಿಂಹಮುದ್ದಂಡಂಸೇವುಣನಾವಗಂಸರಭವಿ
23ನ್ತೀವೂವರುಂರಾಯರಂತುಂಡಂಮುಂಡದೊಳಾಳೆಪೊಯ್ಯದಿರನಾರೇನ್ಪೇಳ್ದಪೆಂರಾಯಭೇರುಂ
24ಡಂರಾಯರಚಕ್ರವರ್ತ್ತಿರಣದೊಳ್ಬಲ್ಲಾಳಭೂಪಾಳಕಂ ‖ ವೃ ‖ ಉರಿಯಂತಂತಟ್ಟೆಯಿಂಸುಟ್ಟುರಿ
25ಸಿನೆಗೆಯೆನೆತ್ತವರ್ಮ್ಮಹೀಚಕ್ರದೊಳ್ಕಗ್ಗರಿಕೇತಂತೆತ್ತಲುಂಪಂದಲೆಪಡಲಿಡೆಧಂಧಂಧಗಿಲ್ಬುಭುರ್ಬ್ಬಗಿಲ್ಫಂಘುರಿ
26ಳೆಂದೇನಳ್ವಿತೋಸೇವುಣಬಳವನಮಂವೀರಬಲ್ಲಾಳಕೋಪೋದ್ಧುರದಾವೋಗ್ರಾನಳಂಶಾತ್ರವನೃಪತಿ
27ಮೃಗಬ್ರಾತಮುಳ್ಕಾಡುವಂನಂ ‖ ಗದ್ಯ ‖ ಸ್ವಸ್ತಿಸಮಸ್ತಭುವನಾಶ್ರಯಂಶ್ರೀಪ್ರಿಥ್ವೀವಲ್ಲ
28ಭಮಹಾರಾಜಾಧಿರಾಜಪರಮೇಶ್ವರಂದ್ವಾರವತೀಪುರವರಾಧೀಶ್ವರಂಯಾದವಕುಳಾಂಬ
29ರದ್ಯುಮಣಿಸಮ್ಯಕ್ತ್ವಚೂಡಾಮಣಿಮಲೆರಾಜರಾಜಂಮಲಪರೊಳ್ಗಂಡಗಂಡಭೇರುಂಡನಸಹಾ
30ಯಶೂರಶನಿವಾರಸಿದ್ಧಿಗಿರಿದುರ್ಗ್ಗಮಲ್ಲಂರಾಯಶಿರಸ್ಸೆಲ್ಲಂಬಿರುದಂಕಭೀಮಂಚಲದಂಕ
31ರಾಮಂನಿಶ್ಶಂಕಪ್ರತಾಪಚಕ್ರವರ್ತ್ತಿಹೊಯ್ಸಳವೀರಬಲ್ಲಾಳದೇವರತತ್ಪಾದಪದ್ಮೋಪಜೀವಿಗ
32ಳಪ್ಪನಾಗಿಗಾವುಂಡನಮಂನ್ವಯಾವತಾರಮೆಂತೆಂದೊಡೆ ‖ ವೃ ‖ ಹರಿಯಸರೋಜನಾಭಿಯೊ
33ಳುಪದ್ಮಭವಂನೆಱೆಪುಟ್ಟುವಂದದಿಂವರನಿಧಿಕೇತಗೌಡವಿಭುಗಂದವನಂಗನೆವಾರಗೌಡಿಗಂದು
34ರುತರತೇಜನೂರ್ಜ್ಜಿತಯಶಂಶುಭಲಕ್ಷಣನತ್ಯುದಾರಿಸಂಗರದೊಳುಫಲ್ಗುಣಂಗೆಣೆಯುನ
35ಲ್ಗುಣಿನಾಗಗವುಂಡಪುಟ್ಟಿದಂ ‖ ವೃ ‖ ಶ್ರೀಗೆನಿವಾಸಭೂಮಿಯೆನಲೊಪ್ಪುವನಾಗಗವುಂಡನಗ್ರ
36ಜಬ್ರೋರ್ಗದೊಳಿಂದ್ರನಂತೆಸೆವರಂಕದಶೂದ್ರಕನಂತೆವಿಕ್ರಮಕ್ಕಾಗರವಾದರೀನೆಗಳ್ದಮಾಳಗವುಂಡನು

37ಮಾಕಗೌಡನುಂಚಾಗದೊಳಂದಧೀಚಿಖಚರೇಶ್ವರರಂಜಿಪ್ಪೋಲ್ವರಿರ್ಬ್ಬರುಂ ‖ ವ ‖ ಮತ್ತಮಾನಾಗಗಾವುಂ
38ಡನಪರಾಕ್ರಮಮುಮಪಕ್ರಮಮುಮಂಪೇಳ್ವೆಡೆ ‖ ವೃ ‖ ಅರಿಸಾಮಂತಕುಳಾಕುಳಾಚಳದಳದ್ದಂಭೋಳಿದಂ
39ಭೋಳಿನಿಷ್ಠುರಸಾಮಂತಗಜೇಂದ್ರಯೂಥವಿಪಳಂನಾಗಾರಿನಾಗಾರಿಭೀಕರಸಾಮಂತರಿಕಾಯದೈತ್ಯಬ
40ಳವತ್ಕಂಸಾರಿಕಂಸಾರಿಸಂಗರರಂಗಕ್ಕಹಿವೈರಿವೈರಿಯೆನಿಪಂಸಾವನ್ತನಾಗಾರ್ಜ್ಜುನಂ ‖ ವೃ ‖ ಮದನನ
41ಮಂತ್ರದೇವತೆಯೆನಿಪ್ಪಗೆರಂಜಿಪಮಾದಿಗೌಡಿಗಂಕದಕಲಿನಾಗಗೌಡವಿಭುಗಂಸುತರಾ
42ದರನೂನದಾನಿಗಳ್ಕದನದೊಳಾಂತರಂತವಿಸುವಿಂದ್ರಸುತಂಗೆಣೆಚಿಕ್ಕಕೇತೆಯುಂಕದಮುಳಕೀರ್ತ್ತಿಗಾ
43ಣ್ಮನೆನಿಪಂಕುಸುಮಾಯುಧಮೂರ್ತ್ತಿಮಾಳೆಯುಂ ‖ ವ ‖ ಮತ್ತಮಾಚಿಕ್ಕಸಾವನ್ತಕೇತನಪರಾಕ್ರ
44ಮಮಂಪೇಳ್ವೆಡೆ ‖ ಛಟಛಟಛಟ್ಛಟಛ್ಛಟಯೆನಲ್ಕುಮುಱಿದತ್ತಿದಿರಾಂತಬೀರರಂಘುೞಿಘುೞಿತಾಗೆನಲುಗ್ಗಿಮದು
45ಕೋೞೆಲುಗಳ್ನೆಲುಂಸೆಱೆಸ್ಲೆನಲ್ಭಟರನನೇಕರಂಭರದೆಸೀಳ್ದುದುಸಜ್ಜೆನೆಸಜ್ಜೆನಲ್ಮದೋತ್ಕಟಮಿದಕೇತಪೆಂ
46ಬಕಲಿನಾಗಗವುಂಡನಗಂಧವಾರಣಂ ‖ ಮಾರವಿರೋಧಿಯನ್ತೆಕಲಿಮಾಕಣನೂರ್ಜ್ಜಿತಪುಣ್ಯಬಂ
47ಮ್ಮರಯಂಧೀರನುದಾರಿರಾಮನನುಜಂಲಕ್ಷ್ಮೀಧರನನ್ತೆಲಕ್ಷ್ಮಣಂಸೂರಿಜನಸ್ತುತಂಬಹುಕಳಾಸಿದ್ಧಿಯುಂ
48ಕದಚಂಪ್ರಮೌಳಿಗಂಭೀರರುದಾರರಿನ್ತೀವರ್ನ್ದಿನನಾಯಕನನ್ವಿರೊಪ್ಪುವರ್ ‖ ವ ‖ ಮತ್ತಂಸಾ
49ಮಂತಚೂಡಾಮಣಿಯೆನಿಸಿದನಾಗಗಾವುಂಡನಗ್ರಜಂಮಾಳಗಾವುಂಡಂಗಮಾತನವಲ್ಲ
50ಭೆನಾಗಗಾವುಂಡಿಗಂಪುಟ್ಟಿದತ್ತನಯರೊಳಗೆಕದನಪ್ರಚಂಡನೆನಿಸಿದಪಿರಿಯಸಾವನ್ತಕೇತನುಂ
51ಬಿರುದರನೆಟ್ಟಿಲುವಂಮುಱಿವಚಟ್ಟಿಯನುಂ । ಕೂರದರಂನಿಮುರ್ಕ್ಕಳಿಸುವಬಂಮ್ಮರಯನುಂ । ಲೋಕಸ್ತು
52ತನೆನಿಸಿದಮಾಕಣನುಂ । ಮಿೞೆನಾಲ್ವರೊಳಗೆಪಿರಿಯಸಾವನ್ತಕೇತನಪರಾಕ್ರಮಮಂಪೇಳ್ವೆಡೆ ‖ ವೃ ‖
53ಧರಣೀದರ್ಪ್ಪಿನಷ್ಟಸಾಮಂತಕರಿರದಲಗುದ್ದಂಡವಿದ್ವಿಷ್ಟಸಾಮಂತರಸೇನಾವಾರ್ದ್ಧಿಯಂಗೋಳಿಡಕೆ
54ಪಡೆವಮುಂಥಾಚಳಂಧೂರ್ತ್ತಸಾಮಂತರಬೇರಂಕಿಳ್ತುವಾರಾಚಿಯೊಳಲೆವಸುರಂಮ
55ಚ್ಚರಂದೋರ್ಪ್ಪಸಾಮಂತರನಾಟಂದೊತ್ತಿಗೋಣಂನುಳಿದುಬಿಡಿವರ್ಮಾಕಾಳಿಸಾವನ್ತಕೇತಂ ‖ ವಚನ ‖
56ಮತ್ತಂನಾಗಗಾವುಂಡಂಗಂಪಿರಿಯಮಾಳಗಾವುಂಡಂಗಂಕಿಱಿಯಮಾಕಗಾವುಂಡಂಗಮಾ
57ತನಸತಿಕೆಳ್ಳಗಾವುಂಡಿಗಂಪುಟ್ಟಿದವೀರಸಾವನ್ತಬಮ್ಮನುಂ । ಸುಕವಿಮಾರನೆನಿಸಿದಮಾರನುಂ
58ಮಿಂನ್ತಿರ್ವ್ವರೊಳಗೆಸಾವನ್ತಬಮ್ಮನಪೆಮ್ಮರ್ಯಂಪೇಳ್ವೆಡೆ ‖ ವೃ ‖ ನೆಗೞ್ದೀಸಾಮನ್ತಬಮ್ಮಂಕುಸುಮ
59ಶರನವ್ರೋಲುದ್ಘಸೌಂದರ್ಯ್ಯರೂಪಂನೆಗೞ್ದೀಸಾವನ್ತಬಮ್ಮಂಸುರತರುವೊಲಮಾಪನ್ನಕೂ
60ತ್ತ್ರೀರ್ನವಪ್ರೊಂನಂನೆಗೞ್ದೀಸಾಮನ್ತಬಮ್ಮಂಪ್ರೊಡವಬಿರುದಸಾಮಂತಗನ್ಧೇಭಸಿಂಹಂನೆಗೞ್ದೀಸಾವನ್ತಬ
61ಮ್ಮಂಗಜಿರಪಿದಿರೊಳಂವಿಱಿವಮಾಱಾಂಪನಾವಂ ‖ ಸ್ವಸ್ತಿ ಶ್ರೀಮನ್ಮಹಾಸಾಮಂತಚೂಡಾಮಣಿ
62ಯುಂ । ಬಿರುದಸಾಮಂತವೀರಾಗ್ರಣಿಯುಂ । ಉದ್ದಂಡಸಾಮನ್ತಗಿರಿವಜ್ರದಂಡನುಂ । ವಾರವಿಳಾಸಿನೀ
63ಕುಸುಮಕೋದಂಡನುಂ । ಕದನಪ್ರಚಂಡಸಾಮನ್ತಮದನಮಹೇಶ್ವರನುಂ । ಚೋಳಕಸಾಮನ್ತಕಟಾಕ್ಷಕ್ಕೈ
64ರವನಶರಚ್ಚಂದ್ರನುಂ । ವಿಭವಾಮರೇಂದ್ರನುಂ । ಮೆನಿಸಿದಹಾದಿಯಕೆಱೆಯನಾಗಗಾವುಂಡಂ
65ತಂನಮಕ್ಕಳುಂತಂನಿಂಪಿರಿಯಮಾಳಗೌಡಮಾಕಗೌಡನಮಕ್ಕಳುಂಮುನ್ತಾಗಿದ್ದರ್ಅಮಿತೆಯ
66ದಂಡನಾಯಕರುಸುಪ್ರತಿಷ್ಠಿತಂಮಾಡಿದಮೃತೇಶ್ವರದೇವರ್ಗ್ಗೆಅಂಗಭೋಗರಂಗಭೋಗಖಂಡಸ್ಫುಟಿ
67ತಜೀರ್ಣ್ನೋದ್ಧಾರಕವಾಗಿಸಕವರ್ಷ ೧೧೨೭ನೆಯ ಕ್ರೋಧನಸಂವತ್ಸರದಪುಷ್ಯಸುದ್ಧಪಾಡಿವ
68ಸೋಮವಾರದುತ್ತರಾಯಣಸಂಕ್ರಮಣದಂದುಅಮೃತಪುರಮಂಸರ್ವನಮಸ್ಯವಾಗಿಬೆಂ
69ದಾರ್ಕ್ಕತಾರಂಬರಂಸಲುವನ್ತಾಗಿಧಾರಾಪೂರ್ವ್ವಕಂಮಾಡಿಕೊಟ್ಟದತ್ತಿ ‖ ಅಮೃತಪುರ
70ದಚತುಸ್ಸೀಮೆಯಕ್ರಮವೆಂತೆಂದೊಡೆ । ಬಡಗಣದೆಸೆಯಕಂಕಗೌಡನಕೆಱೆಯೊಳಗಣಹ

71 ಳ್ಳದಬಳಿಯನಟ್ಟಕಲ್ಲು । ಅಲ್ಲಿಂ ತೆಂಕಲೋಣಿಯಬಳಿಯನಟ್ಟಕಲ್ಲು । ಅಲ್ಲಿಂ ಮೂಡಮುನ್ನಾ

72 ಗಿಕೊಟನವುಡುವಿನಕಟ್ಟೆಯ ಕೆಳಗಣಬಾಗಿನಮೂಡಣದಡದನಟ್ಟಕಲ್ಲಾದಿಯಾಗಿ

73 ಚಿಣ್ಣವಗಟ್ಟದಕೆಳಗಣಚಂಚರಿವಳ್ಳದಬಳಿಯಣನಟ್ಟಕಲ್ಲಾದಿಯಾಗಿತೆಂಕಮುಂದಾಗಿಹೆಬ್ಬ. .

74 ಸಾಲೆಗ್ಗೊಂಡನಟ್ಟಕಲ್ಲುಮೊದಲಾಗಿಪಡುವಮುಂತಾಗಿಹೆಬ್ಬಳ್ಳವೇರೆಯಾಗಿ . . . .

75 . ಜವನನಕೆಱೆಯಕೆಳಗಣಹಳ್ಳಹೆಬ್ಬಳ್ಳವಕೂಡಿದಲ್ಲಿನಟ್ಟಕಲ್ಲುಮೊದಲಾಗಿ . . . .

76 ಯನಕೆಱೆಯೊಳಯಿಂಕೆಬಳಹಳ್ಳ . . . .

77 ಯೊಳಗಣಹಳ್ಳವೇರೆಯಾಗಿಕಂಕಗೌಡನಕೆಱೆಯ . . . .

43

ಅದೇ ದೇವಸ್ಥಾನದ ದಕ್ಷಿಣಕಡೆಯಿರುವ ೧ನೇ ಕಲ್ಲಿನಲ್ಲಿ.

ಪ್ರಮಾಣ 4′ × 1′ 8″.

1 ಹಿರಿಯಸಾಸನದಕೊಱತೆಯಸಾಸನಅಮ್ರಿ

2 ತಪುರದಲುಅಮಿತೆಯದಣ್ಣಾಯಕನಗೌಡಿಕೆ

3 ಯವ್ರುಂಬಳಿತೋಟಸಹಿತಗದ್ದೆಗಂಗನಗಳೆಯಲಮ

4 ತ್ತರಯ್ದುವತ್ತ ೫ ಮನೆಯಸ್ಥಳಕಾಳವ್ವೆದಣ್ಣಾಯಕಿತ್ತಿಯ

5 ರವನೆಯಬಡಗಣಬೇಲಿಯಾದಿಯಾಗಿಹೆಗ್ಗಡೆಜಕ್ಕಣ್ಣನಮ

6 ನೆಯಪಡುವಣಬೇಲಿಅರಮನೆಯಹಿತ್ತಿಲಪಡುವಣಬೇಲಿಅ

7 ಯಿಚಯ್ಯನತೆಂಕಣಹಿತ್ತಿಲಬೇಲಿಮೇಗೆಬಲ್ಲಯ್ಯಕಾಮಯ್ಯ

8 ನತೆಂಕಣಹಿತ್ತಿಲಬೇಲಿವೇರೆಯಾಗಿಮೂಡಲುಅರಳಿಯಕ

9 ಟ್ಟೆವೇರೆಯುಮೊದಲಾಗಿಬಡಗಮುಂತಾಗಿಬ್ರಹ್ಮಪುರಿಯ

10 ಕೇರಿಯಹಿತ್ತಿಲಬೇಲಿವೇರೆಯಾಗವ್ರುಡಿಕೆಯತುಡಿಕೆನಿವೇಶನದ

11 ಕಂಬ ೩೦ ದೇವರಗಂಗುರದಗವ್ರುಡಿಕೆಯಗದ್ದೆಗಂಗನಮತ್ತರೊಂದು

12 ಮತ್ತ ೧ ಆ ಬೆದ್ದಲುಮತ್ತರೆರಡುಮತ್ತ ೨ ಆವಸಕೆಳದೇವರಬೆಳ್ಳಗೆಱೆ

13 ಯಗವ್ರುಡಿಕೆಯಗದ್ದೆಗಂಗನಮತ್ತರೊಂದುಮತ್ತ ೧ ವೊಱತಲೆಯ

14 ಮತ್ತರೊಂದು ೧ ಆಬೆದ್ದಲುಮತ್ತರುಮೂಱು ೩ ಆವೂರಮನೆಕೆ

15 ಳನುಹುಣಿಸೆಯಕಟ್ಟದಗವ್ರುಡಿಕೆಯಗದ್ದೆಗಂಗನಮತ್ತರೆರಡು ೨

16 ಆಮನೆಕೆಳನ ಅದ ಗವ್ರುಡಿಕೆಯಲ್ಲಕೆಱೆಯಕಟ್ಟದಲ್ಲಿ

17 ಗೆಯಿಕ್ಕಿದಕೊಡಿಗಿಯಗದ್ದೆ ॥ ಯಿಾಯಮಿತಪುರದಲು

18 ಅಮ್ರಿತೇಶ್ವರದೇವರಭೂಮಿಯೊಳಗೆಆರುಅಡಕೆತೋಟವನಿಕ್ಕಿ

19 ದವರಿಗೆಎಂದೆಂದಿಗಂಗಂಗನಗಳೆಯಲುಕಂಬವೊಂದಕ್ಕಂಕಲ್ಲಿ

20 ಯ್ಯಗುತ್ತಗೆಪಿಂಡಾದಾನವಾಗಿತೆಱೆಪಣಂಮೂಱುತೆಱುವರಗಂಗ

21 ನಗಳೆಯಲುಕಂಬವೊಂದಕ್ಕಂತೆಱುವೆ ೩ ಹಳ್ಳವಹೂಳಿಅಡಕೆದೋ

22 ಟವನಿಕ್ಕಿದವರಿಗೆಆಮರಫಲಕ್ಕೆಬರಲೊಡನೆಯಿಾಮರ್ಯ್ಯಾದೆಯ

23ತ್ರೆಯುವರುಆತೋಟಂಗಳುಅಧಿಕ್ರಯವಿಕ್ರಯಕ್ಕೆಸಲು
24ವವು ಸ್ವಸ್ತಿಶ್ರೀಜಯಾಭ್ಯುದಯಶ್ಚ ಅಮಿತಯ್ಯದಣ್ಣಾಯಕ
25ರುಶ್ರೀಯಮಿತೇಶ್ವರದೇವರಪ್ರತಿಷ್ಠೆಯಲು
26ಧಾರಾಪೂರ್ವಕವಾಗಿಕೊಟ್ಟಯಿಪ್ಪತ್ತುನಾಲ್ಕುಬ್ರಹ್ಮಪುರಿಯ
27ವ್ರಿತ್ತಿನಾನಾಗೋತ್ರೇಭ್ಯಃಅಮ್ರಿತಪುರದಹಿರ್‍ಯ್ಯಕೆಱೆ
28ಯಕೆಳಗೆವ್ರಿತ್ತಿಹಂನೆರಡಕ್ಕಂಗಂಗನಗಳೆಯಲುಕಂಬ

44

ಅದೇ ಕಲ್ಲಿನಲ್ಲಿ.

1ಶ್ರೀ ‖ ಪರಭವಸಂವತ್ಸರದಪುಶ್ಯಸುಧಬಿದಗುಸೋಮರ
2ದಲುಅಲ್ಲಿಖಿನಸಹೇಬರುಬಂದು । ಪುರ್ವವಿಚೆರಿಸಿ । ಯಿ
3ಗ್ರಮದಭ-ಮಿನುಬಿಡಸಿಕೊಟ್ಟು । ಯಿಸ್ತ್ರೀದಗೌಡನೇ
4ನಬೋವಗಳುಸಹುಬಂದು ‖ ನಕ್ಲುದಿಕಿಗುಕಲ್ಲುನಟುಕೊ
5ಟರು ‖ ಯಿದಕ್ಕೆಆರುಪಕ್ಷಪರಪಕ್ಷಮಾಡಿದರೆ
6ದೇವಲೋಕಕೆಹೊರತು

45

ಅದೇ ದೇವಸ್ಥಾನದ ದಕ್ಷಿಣಕಡೆ ನೆಟ್ಟಿರುವ ೨ನೇ ಕಲ್ಲು.

ಪ್ರಮಾಣ 10′ × 3′ 6″.

1ಜಯತಿಶಿವಶಾಸನಂಭೂಚರಖೇಚರದಿವಿಜರಾಜ ಮಕುಟಾರೂಢಂ ಧರ್ಮ್ಮಪ್ರಸಾದವರ್ದ್ಧಿತಲಕ್ಷ್ಮೀನಿತ್ಯಪ್ರದಾಯಕಂ ಜಗತಿ ‖
2ಶ್ರೀಮತ್ಸೇನಾಧಿನಾಥೋತ್ತಮನನಮಿತನಂರಕ್ಷಿಸುತ್ತಿರ್ಕ್ಕೆತಾರಾಸೋಮಂ ನಿಲ್ವಂನೆಗಂನಾರದಮಸ್ತ್ರಣರಸವ್ಯಕ್ತಗೀತಾಮೃತಂ
3ಗೌರೀಮುಗ್ಧಸ್ನಿಗ್ಧಮನ್ದಸ್ಮಿತಮಧುರಕಟಾಕ್ಷಾಮೃತಂ ದೇವರಾಜಪ್ರೇಮಸ್ತುತ್ಯಾದಿಸದ್ವಾಗಮೃತಸಮೃತ ನಾಥಂತ್ರಿಳೋಕ್ಯೈಕನಾಥಂ ‖ ಸಿರಿಯ
4ಲಗ್ಗಣ್ಣಬೆಳ್ವೆಳಗಿನಿಂಪುದಿಪಂಬುಜನಾಭನೀಶನಂತಿರೆಗಿರಿಜಾಕಟಾಕ್ಷರುಚಿಗಳ್ಪುದಿದೀಶನುಮಬ್ಜನಾಭನಂತಿರೆಜನಸಂಸ್ತವಂತಮಗೆಪಲ್ಲಟಮಪ್ಪಿನಮೊಪ್ಪಿತೋಱುವಾಹರಿಹರದೇವರೊಲ್ದಮಿತನಂಪರಿರಕ್ಷಿ
5ಸುತಿರ್ಕ್ಕೆಸಂತತಂ ‖ ವಿನತಕ್ಷತ್ರಿಯಪುತ್ರಸಂತತಿನವೀನೋತ್ತಂಸಮಂರಾಜಶಾಸನಮುಂಮಸ್ತಕಪೀಠದೋಳ್ತಳೆಯೆನಾಲ್ಕುಂದಿಕ್ಕಿನೊಳ್ಸೀಮಾಶಾಸನಮುಪ್ಪಂತುದಯಾಚಳಾದಿಕುಧರಂ
6ಬಲ್ಲಾಳದೇವಂಗೆಮೇದಿನಿಯುಂಸಾಧಿಸಿಕೊಟ್ಟುಶೌರ್ಯ್ಯಮಮಿತಂಗಕ್ಕುಂಪೆಱಂಗಕ್ಕುಮೆ ‖ ಗದ್ಯ ‖ ಆನಿಶ್ಯಂಕಪ್ರತಾಪಚಕ್ರವರ್ತಿಯನ್ವಯಾವತಾರಮದೆಂತೆಂದೊಡಮೃತದಮೃತಕರನಕ
7ಮಳೆಯಕೌಸ್ತುಭದಪಾರಿಜಾತದೈರಾವತದುಚ್ಚೈಶ್ರವವಜ್ಜ್ರಸಯರ ಸಂಭೂತಿಯಿಂಖ್ಯಾತಿಗಾಕರವಾದಪೀಯೂಷರತ್ನಾಕರದನಡುವೆ ‖ ವೃ ‖ ಸಿರಿಯುಂಕೌಸ್ತುಭರತ್ನಮುಂಹರಿಯ

8ನಂತಾಶಂಖಮುಂಚಕ್ರಮುಂಭರದಿಂಪೇೞಿಬಹಿತ್ರದಂತಿರೆಸೆದಿರ್ದ್ದಂಶೇಷನಾಕ್ಷೀರಸಾಗರದೊಳ್ದೇವನನಾಭಿಪದ್ಮದವ್ಯ
ಕ್ತಾಳಂಕೊವಕೆಂಬಂಬೊಲಚ್ಚರಿಯಾಗಿರ್ದ್ದುದುಕರ್ಣ್ಣಾಧಾರನವೊಲಿರ್ದ್ದಂಪುಟ್ಟಿಪದ್ಮೋದ್ಭವಂ ‖ ಪರಮಬ್ರ

9ಹ್ಮನಚಿತ್ತದೊಳ್ಮುನಿಗಳೇೞ್ಪುಟ್ಟಿದತ್ರ್ಯನ್ಮುನೀಶ್ವರರೊಳ್ಪೆಂಪೆಸೆವತ್ರಿಪದ್ಮದಲರೊಳ್ಪದ್ಮೋದರಂಪದ್ಮವಿ
ಷ್ಟರನಂಪುಟ್ಟಿಸಿತರ್ಕ್ಕಮಚ್ಚರಿಪವೊಲ್ಕಣ್ಣಿಯ್ದಲಿಂದಂಸುಧಾಕರನಂಪುಟ್ಟಿಸಿದಂ

10ಪವಿತ್ರಮುದಯಸ್ಥಾನಂಮಹಾಭಾಗದೊಳ್ ‖ ಯಿಂದುವಿಳೋಚನೋತ್ಸವದಿನಿಂದುಮನೋಜಸಹಾಯವೃತ್ತಿಯಿಂ
ದಿಂದುಕಳಾಳಿಯಿಂಮೆಱೆವನಂದುನೃಸಿಂಹನೃಪಾಳಸೂನು

11ತಾನಿಂದುವಿಳೋಚನೋತ್ಸವದಿನಿಂದುಮನೋಜಸಹಾಯವೃತ್ತಿಯಿಂದಿಂದುಕಳಾಳಿಯಿಂಮೆಱೆವುತಿರ್ದ್ದಪನಿಂದುಕುಳಪ್ರ
ದೀಪಕಂ ‖ ಕ ‖ ಅರಾಜನಪುತ್ರಂಮದವಾರಣವಿದ್ಯಾವಿಳಾ

12ಸದಿಂಬುಧನೆಂಬಂಧಾರಿಣಿಯೊಳ್ನೆಗೞ್ದಂದ್ವಿರದಾರೋಹಕಚಕ್ರವರ್ತ್ತಿಬಲ್ಲಾಳನವೊಲ್ ‖ ಆತನಮಗಂಪುರೂರವನಾ
ತಂಗಂದೇವಲೋಕಪೂರ್ವ್ವಸಿಗಂವಿಖ್ಯಾತನುದಯಿಸಿದನುಪಮಾತೀತಬ

13ಳಕ್ಕಾಯುವಾಯುವೆಂಬನೃಪೇಂದ್ರಂ ‖ ಅವನಮಗಂನಹುಷಂಮತ್ತವನತನೂಜಂಯಯಾತಿತದ್ವಿದರುರ್ವ್ವೀಧವರಾ
ಗೆಬಳಕೆಪಲರುದ್ಭವಿಸಿಪರಾಸೋಮವಂಶದೊಳ್ಯದುವೆಂಬಂ ‖

14ಆಯದುಪದಗ್ರತೆಮಿಗೆನೆಗೞ್ದಯದುವಿಂಯಾದವಾಭಿಧಾನಸೋಮಾವ್ಮಾಯಕ್ಕೆ ರೂಢಿವಡೆದತ್ತಾಯಾದವರೊಳಗೆನೆಗ
ೞ್ದನಸಹಾಯಬಳಂ ‖ ವೃ ‖ ಸಳನೆಂಬಂಶಶಕಪ್ರಸಿದ್ಧ

15ಪುರದೊಳ್ವಾಸನ್ತಿಕಾದೇವಿಯಂತಳೆದಾರಾಧಿಸುವಾಗಳುತ್ತರಳನೇತ್ರಂಘೋರವಕ್ತ್ರಂವಿಶ್ರಂಖಳಗಾತ್ರಂಪುಲಿಪಾಯೆ
ಕಂಡುಮುನಿನಾಥಂಕುಂಚಮಂಕೊಟ್ಟುಪೊಯ್ಸಳಎಂದಂಬೞಿಕಾ

16ಯ್ಯುಪ್ಪೊಯ್ಸಳವೆಸರ್ತಾಂಯಾಪವೋರ್ವ್ವೀಶರೊಳು ‖ ಕ ‖ ಅಲಗಿಂಸಿಂಗಮನಿಱಿದನಕಲಿತನಮಂನಗುವತೆಱದೆಮೆಱೆ
ವುದುಸೆಳೆಯಿಂಪುಲಿಪೊಯ್ದುಕುಱುಪುಪೊಯ್ಸಳಕುಲ

17ತಿಲಕನಮತ್ತಗಜದಟಕೆಯದೊಳೀಗಳ್ ‖ಮತ್ತೇಭ‖ ಅನಿತೊಂದುಂನತಿವೆತ್ತಪೊಯ್ಸಳಕುಳಂಪೂರ್ವ್ವಾದ್ರಿಯುಂಪೋ
ೞ್ವಿನಂವಿನಯಾದಿತ್ಯನೃಪಾಳನುದ್ಭವಿಸಿದಂಭೂಲೋಕದಾದಿತ್ಯನೆಂಬಿನೆಗಂಕಟ್ಟಿಲೆ

18ಕೊಡೆಕಣ್ಗೆಕವಿವತ್ತನ್ಯಾವನೀಶರ್ಗ್ಗೆತೊಟ್ಟನೆಕಯ್ಕೊಂಡುದಲಕ್ಕ್ರಯಂಕುವಳೆಯುಂಮತ್ತಾತನಿಂಕೌತುಕಂ ‖ ಕೆಳೆಸ
ಡೆಯಿಂಕಳಹಂಸಗೆಕೆಳೆನುಡಿಯಿಂಕೋಕಿಳಕ್ಕೆಸೋಗೆಗೆಮುಡಿಯಿಂಕೆ

19ಳೆಕೆಳೆಯುಬ್ಬರಸಿಯೆತಕ್ಕಳವಧುವಾದಳ್ತದೀಯಸುತನೆಱೆಯಂಗಂ ‖ ವೃ ‖ ನೆಱವಿಂದಂವೈರಿಬೃಂದಂಕವಿವುದುಮುನಿ
ತೊಂದಂರಣೋತ್ಸಾಹದಿಂದಂತಱಿದೊಟ್ಟಲ್ಸೀಳ್ದುಮೆಟ್ಟಲ್ಯಮ

20ಪುರಿಗಿರದಟ್ಟಲ್ಚಲಂಮುಟ್ಟಿಕಟ್ಟಲ್ನೆಱೆದತ್ತಂಕಯ್ದುವೊತ್ತಂವಸುಧೆಯೊಳಗೆಮತ್ತಂಜಸಂಬೆತ್ತನಾಸಂದೆಱೆಯಂ
ಗಂವೀರಗಂಗಂರಿಪುತಿಮಿರಪತಂಗಂಜಯಶ್ರೀಭುಜಂಗಂ ‖ ಚಲದೆ

21ಱೆಯಂಗೆಚಾಗದೆಱೆಯಂಗೆಜಕ್ಕೆಱೆಯಂಗೆವಿಕ್ಕದೋರ್ವ್ವಲದೆಱೆಯಂಗೆವೀರದೆಱೆಯಂಗೆಕುಲೋನ್ನತಿತನ್ನೊಳೊ
ಪ್ಪವೇಚಲೆಯುಱೆಯಂಗೆಕೀರ್ತ್ತಿಯೆಱೆಯಂಗೆಱೆಯಂಗನೃ

22ಪಂಗೆನಂದನಂಜಲಧಿಪರೀತಭೂವಳಯವರ್ದ್ಧನನಂಕದವಿಷ್ಣುವರ್ದ್ಧನಂ ‖ಕ‖ ಬಲ್ಲಾಳನತಂಮಂಗೇಂಬಲ್ಲಾಳ್ತನಮೆ
ರವೆತೇಜಮೆಂಬುದ.ಪೆಱರ್ಗಿಂನಿಲ್ಲದಯಾದಿತ್ಯಮಹೀವಲ್ಲಭನಣ್ಣಂಗೆವಿ

23ಷ್ಣುಗಲ್ಲದೆಜಗದೊಳ್ ‖ ವ ‖ ಆಪರಮಮಾಹೇಶ್ವರಸಮಯಾಧಾರನುಂಮಪರರುದ್ರಾವತಾರನುಂಮೇಕಾಂಗವೀರನುಂಮೆ
ನಿಸಿನೆಗೞ್ದಬಲ್ಲಾಳದೇವನಬಲ್ಲಾಳ್ತನಮಂಪೇೞ್ವೊಡೆ ‖ ವೃ ‖ ಕಾಳೆ

24ಗದೊಳ್ತಶಂಗಡಿದುಮುಂದಣಘಟ್ಟನವ್ರಂಕಿಪಾಯ್ದೊಡಾವಾಳವಚಕ್ರವರ್ತ್ತಿಜಗದೇವನೆತಂನಮದಾಂಧಸಿಂಧುರಂಕೀಳಡೆ
ಪೊತುರಾವ್ರತೆಸೆರಾವ್ರತನಲ್ಲೆನಿದಿಚ್ಚವೀರಬಲ್ಲಾಳನೆನೆಂದುಮೆ

25ಪ್ಪಿತಿವಿದಾಳ್ತನವಚ್ಚರಿಯೂಯುದ್ಧಧಾತ್ರಿಯೊಳ್ ‖ ವೃ ‖ ಬಿಟ್ಟಿಗನಾಹವಾಂಗಣಕೆಚಿಟ್ಟಿಗನೆತ್ತಿದೊಡತ್ತಕಂಚಿಯೆಂ
ಗೊಟ್ಟುದುಕೊಂಗಕೂಡೆನೆಲೆವಿಟ್ಟುದುವಿಕ್ಕವಿರಾಟಕೋಟೆಕೂಗಿಟ್ಟುದು
26ಕೋಯತೂಕ್ಕಿರಪಟಿಕೆಟ್ಟುದುರೂಢಿಯ ಚಕ್ರಗೊಟ್ಟವಿಂಬಿಟ್ಟುದುಕಯ್ದುವಿಕ್ಕಿಕಡಲೊಳ್ಪಡಲಿಟ್ಟುದು ಸಪ್ತಕೊಂ
ಕಣಂ ‖ ಮುನಿದಾಂತೊಡ್ಡಿದಚಾತುರಂಗಬಳಮಂಕಣ್ಮುಟ್ಟೆನೋಳ್ನೋಡಿತೊ
27ಟ್ಟನೆತಾಂಕಂಡೊಡೆಹುಃಬಬಾಪ್ಪುಃಬಿಕೆಂಬಲ್ಮೂಳಿಯ ಎನಕ್ಕರನೆಕ್ಕರನೆ ಬೇಕ್ಕೆರಯ್ದುಬಿಸಲ್ಕಾಸಪ್ಪೆನಳವಿಂತೆಂದೆ
ತ್ತಿಬೊಪ್ಪಿಟ್ಟುವೊಣ್ಬನೆವೂಣಂವಿಳಯೂನೃಕಂಗೆಕುಡುಗಂಕೈ
28ಘಟ್ಟಿಗಂಬಿಟ್ಟಿಗಂ ‖ ಧುರದೋಳುವಿಷ್ಣುನೃಪಂಗೆವಿಗ್ವಿಜಯದುದ್ಯೋಗಂಬರಂಸಿಲ್ವಭೂವರರಾರಾನ್ನೃಪರಾಮನೆತ್ತು
ವೃಪುಬೇಪೊಂದಕ್ಕರದೇಕೇನ್ತುಳಾಪುರುಷಕ್ಕೆಂದು ಹಿರಣ್ಯಗರ್ಭವಿರಲೆಂ
29ಪುತ್ತುಂಗದೇಪಾಲಯೋತ್ಕರಮಂಮಾಡಿಸಲೆಂದುಸಂದಪರರಾಷ್ಟ್ರ್ರೆಗ್ಗೆತಾನೆತ್ತುಮ ‖ ಶತವ ಖಿನಳ್ಕೆನೂಡುವವು
ಖಂಗಳವೇರುಗಳೆಂದತಾರಕಪ್ರತತಿಗಳಾರಯಲ್ಪಡೆವದೇಕು
30ಳಂಗಳವಾರ್ಧಿಗೆತ್ತಹಪ್ಪರ್ತಿಪ್ರೋಗೆಟ್ಟುನಿಟ್ಟಿಪ ತಟಕಟಯುಂಗಪರ್ವರಯಿಂದ ಪೂಜ್ಜಿರತವೆನಿಪ ಗ್ರಹಾರಪುವ್ರ
ವಿಷ್ಣುನೃಪಾಳಕನಿತ್ತದತ್ತಿಗಳ್ ‖ ಕ ‖ ದೇವಿವೆಶರೆಸೆವಲ
31ಕುಮಾದೇವಿಗವೂವಿಷ್ಣುವರ್ದ್ಧನಂಗಂತನಯಂ ಶ್ರೀವಿಜಯನಾರಸಿಂಹವಹೀವಲ್ಲಭನನವೀರನುಪಮಾತೀತಂ ‖ ವೃ ‖
ಕೆಪಟಿತ್ತಳ್ಕತ್ತುಬಳ್ಕತ್ತಿಗಿದುದುಗಿದುದಸ್ಮದ್ಬಳಂನಿಲ್ಲದಿಂನೀಪದವೊ
32ಳ್ಕೈಕೊಳ್ಪೆನೆಂದೊಡ್ಡಿದಿರೊಳೊಡವಿನಿಸ್ವಾಣಮಂತಾನೆ ಸೂಳ್ಳೈಸಿದಸತ್ತಲ್ತೈಕುಪ್ರವಾಣಾಮ್ಮರ್ಲೆದೊಡತಲೆಗೊಂಡತ್ತಿ
ದಂತಂಗಭದ್ರಾನದಿಯಂಪಾಂಡ್ಯಾವನೀಭೃದ್ಬಳದಪೆಣಗಳಂಕ
33ಟ್ಟಿದಂನಾರಸಿಂಹಂ ‖ ನರಸಿಂಹಂನರಸಿಂಹನಂತೆಮುನಿಸಿಂಪೂಕ್ರಾಂತವೀರಾರಿಭೂಪರನಣ್ಮುಟ್ಟೆನೋಳಂತುಕಂಡೊಡೆಬ
ಟಿಕ್ಕಂಮುಂಮುಪ್ರೋಚ್ಚಿಕ್ಕಿಪೇರುರಮುಂದೊಕ್ಕೆನೆಕುತ್ತಿಚಕ್ಕನೆ
34ಭುಜದ್ವಂದ್ವಂಗಳಿಂದೆತ್ತಿಬಲ್ಗುರುಳಂಕೋದೆಳಲಿಕ್ಕಿಬೀರಸಿರಿಗೆತ್ತಂತೋರಣಂಗಟ್ಟನೆ ‖ ನಗೆವೋಗವೆಂಬಚಂದ್ರಮನನ
ಪ್ಪಿದಕೈರವಲಕ್ಷ್ಮಿಯುಂಬಿನಂಸೊಗಯಿಪಚಲ್ಲಣಚೆಬುಕವುಂ
35ಪರಿಚುಂಬಿಸುವಂತೆಬಿಂಕವಿಂನೆಗಡಘ ತಸ್ಯನಂ ಸುಟಿ ಗುರುಳ್ನಳತ್ತೋಳ್ಕಳ ಕೋಕಿಳಸ್ವನಂಗೆಯುಗೆಕೂಡೆಸೋಲಿಸುವ
ಳೀಚಲದೇವಿನೃಸಿಂಹದೇವನಂ ‖ ಕ ‖ ಪಟ್ಟಮಹಾದೇವಿಗವೂಕ
36ಟ್ಟಣಕೆಪಕಲಿಯೆನಿಪ್ಪನರಸಿಂಹಂಗಂಪುಟ್ಟಿದನಾಹವಜಯದೊಡವುಟ್ಟುವಿನಂರಾಯಮನ್ಮಥಂಬಲ್ಲಾಳಂ ‖ ಧರೆಯಂತಾ
ಬ್ಧಿಪರ್ಶೇಷನುಂಕಮಠನುಂದಿಗ್ದಂತಿಸನ್ತಾನಮುಂನೆರೆದೇಕಾಂಗ
37ದಿನಾಂತವ್ರೋಲ್ ಭುಜಗರಾಜದಾತ್ರಿಪಂಕೂರ್ಮಖಪ್ಪರಕೋಪೋಚ್ಚಳತಾಂಶಮಾದಿಗಿಭಹಸ್ತಸ್ಥೂಳವಾಂತತ್ತಿಳಾಭ
ರಮಂರಕ್ಷಣದಕ್ಷದಕ್ಷಿಣಭುಜಂಬಲ್ಲಾಳಭೂಪಾಳನಾ ‖ ಮುನಿ
38ಸಿಂದಂತೋಳಬಾಳಂಜಡಿವನಡೆಯೆಸೂಳಯ್ದು ಸೂಳಯ್ದನೂಂಕೆಂಬನಿತಕ್ಕಾರ್ಕಂಪಂನರಾರೋಮದುಹುಸಿಹುಸಿವಾಣೆ
ತ್ತಮುಂದಾಯ್ತುಸಿಂಹಾಸನಮುತ್ತಲ್ವಾದ್ಧಿರ್ವು
39ಟ್ಟಟ್ಟಿದಪದನಳಗಿರಟ್ಟಾಳ್ಗೆಕೊಟ್ಟೋಲಿಗೀವೋದಿನಿಸಾಧ್ಯಂಬಾಪ್ಪಿವೆಂರಾಯರೊಳತಿಬಳನೋವೀರಬಲ್ಲಾಳದೇವಂ ‖ ಕ
ದನಪ್ರೌಢಚಂಡಭೂಮಂಡಳಪತಿಗಳಬೇರ್ವೆಗ್ಗೆರಬೆಂನೀರಹೊಯ್ದಾದುದು
40ಕಾಯಿಪ್ಪಂಬಾಳನಿಸ್ಸಂಗರಸಮಯದೊಳಂತಂತವಷ್ಟಂಭದಿಂತೂಗಿದಬಾಳ್ಬಾಳ್ವತ್ತುಬಾಯ್ವಿಗ್ಗಡದಬಿರುದರಂತೂಗಿತು
ತ್ತಿಟ್ಟುದೆಂತಾಳ್ದದನೋವಿಕ್ರಾನ್ತಮಂಯೂದವಕುಳ
41ತಿಳಕಂವೀರಬಲ್ಲಾಳದೇವಂ ‖ ಕುಂಡಾಳಂಮದವೃಳ್ಳಚೋಳನಳವಿಂದಾಸಿಂಹಳಂಸಿಂಹವೃದ್ದಂಡಂಸೇವುಣನಾವಗಂಸರಭ
ವಿನ್ನೀನೂವರುಂರಾಯರಂತಃಡಂಮುಂ

42 ಹದೊಳಾಳೆವ್ರೊಯ್ಯದಿರನಾರೇನ್ ಪೇಳ್ದಪರಾಯಭೇರುಂಡಂರಾಯರಚಕ್ರವರ್ತ್ತಿರಣದೊಳ್ಬಲ್ಲಾಳಭೂಪಾಳಕಂ ‖ ಉರಿಯಂತಂತಟ್ಟಯಿಂಸುಟ್ಟುರಿಸಿಸೆಗೆಯೆನೆತ್ತವರ್ಗ್ಗಹೀ

43 ಚಕ್ರದೊಳ್ಕಗ್ಗರಿಕೆಂತಂತೆತ್ತಲುಂ ಪಂಪಲೆಪಡೆವಿಡೆದಂಧಂಧಗಿಲ್ಬುಭುರ್ಗ್ಗಿಲ್ ಘುಂಘುರಿಲೆಂದೇನಳ್ವಿತೋಸೇವ್ರಣಬಳವನ ಮಂವೀರಬಲ್ಲಾಳಕೋಪ್ರೋದ್ಧುರಸಾವ್ರೋಗ್ರಾನಳಂಶಾತ್ರವನೃಪತಿ

44 ವ್ರಗಬ್ರಾತಮುಳ್ಕಾಡುವಂನಂ ‖ ಮುಳಿದುಕಡಂಗಿಸೋರ್ವ್ವಭಟಕೋಟಿಗೆವಾರ್ದ್ಧಿತರಂಗದನ್ತಸಂಗಳಸುವವಾಜಿರಾಜಿಗೆ ದಿಶಾಪ್ರಸರಂಕವಿವಂತೆನೂಂಕಲೌವ್ವಳಿಸುವಗಂಧಸಿ

45 ನ್ಧುರಘಟಾಳಿಗೆವಕ್ಷಿಣಚಕ್ರವರ್ತ್ತಿಕಂಡಳವಿಯೊಳಾದ್ಧುರ್ಬ್ಬೊಬ್ಬಿಱಿದುನೂಂಕಿದನಗ್ಗದಪಟ್ಟದಾನೆಯಂ ‖ ಒಂದೆರಡ ಟ್ಟಿಕೆಕ್ಕಡಮೊನೆಯೊಳ್ತರುಗುತ್ತಿರೆಬಲ್ವೇಣಿಮರಳೊಂದ್ದೆರಡಗ್ರ

46 ಹಸ್ತದೊಳಗುರ್ವ್ವಿಸವೋಡಿದತಾಳವಟ್ಟದೊಳ್ಬಂದಪೆಣಂಪೆಡಂವ ಗಳಿಕಣ್ಗೆಸೆಗುಂಜವನೇಱಿದೊಂದುಜಕ್ಕಂದೊಳದಂ ತೆಸೇವ್ರಣಘುರಟ್ಟನವೀರವಿಳಾಸಸಿಂಧುರಂ ‖ ಅರಸುಗಳೆಂದೆರಪ್ಪ್ಬ

47 ಸಾಲೊಳೊಂದೆರಡಳ್ಕಿಪಕೋಟಿಯೊಳ್ನಿರಂಬೆರಸಿಱಿವಾಳ್ತನಕ್ಕೆ ನಿತನಿಕ್ಕರವಲ್ತಸಹಾಯಶೂರನಾಂತರನಿಱಿದಟ್ಟಿಯಾಡಿ ಸಿದತ್ರೋಬ್ಬಿಲದಿಂನಡೆಗೋಱುಗೊಂಡಸಂಗರವೆಣಿಸಲ್ಕಳುಂಬಮದನಾ

48 ವ್ರಪರಾವ್ರಪನೇನಬಣ್ಣಿಪೆಂ ‖ಕ‖ ಆರೆಣೆ ಯಂಬೆನಳುಂಬದವೀರವನೀಜಗನುನಾವಗಂಸುತ್ತಿದಮಂನೀರೆಂಬುದುಬಿರುದಿ ನಬೆಳ್ಳಾರೆಸಿಸಿದುದದಟರಾಯಕೋಳಾಹಳನ ‖ ಗದ್ಯ ‖

49 ಸ್ವಸ್ತಿಸಮಸ್ತಭುವನಾಶ್ರಯಂ ಶ್ರೀಪ್ರಿಥ್ವೀವಲ್ಲಭಮಹಾರಾಜಾಧಿರಾಜಪರಮೇಶ್ವರಂದ್ವಾರಾವತೀಪುರವರಾಧೀಶ್ವರನುಂ ಯಾದವಕುಳಾಂಬರದ್ಯುಮಣಿಸಮ್ಯಕ್ತ್ವಚೂಡಾ

50 ಮಣಿಮಲೆರಾಜರಾಜನತುಳತರತೇಜಂಮಲಪರೊಳ್ಗಂಡಂಕದನಪ್ರಚಂಡನಸಹಾಯಶೂರನೇಕಾಂಗವೀರಂಶನಿವಾರಸಿದ್ಧಿ ಶರಣಾಗತವಾರ್ದ್ಧಿಗಿರಿದುರ್ಗ್ಗಮಲ್ಲಂರಾಯಸಿರಸೆ

51 ಲ್ಲಚಲದಂಕರಾಮಂಬಿರದಂಕಭೀಮಂನಿಶ್ಶಂಕಪ್ರತಾಪ ಚಕ್ರವರ್ತ್ತಿಹೊಯ್ಸಳಶ್ರೀವೀರಬಲ್ಲಾಳದೇವರುದುಷ್ಟನಿಗ್ರಹಶಿ ಷ್ಟಪ್ರತಿಪಾಳನಾರ್ತ್ಥಮುತ್ತರದಿಗ್ವಿಜಯಪ್ರಸಂಗದಿಂ

52 ಬಂದುವಿಜಯಳಮುದ್ರಾಪರನಾಮಧೇಯಮಪ್ಪಹಳ್ಳವೂರನೆಲೆವೀಡಿನೊಳುಸುಕಸಂಕಥಾವಿನೋದದಿಂಪೃಥ್ವೀರಾಜ್ಯಂಗೆ ಯುತ್ತಮಿರೆ ‖ ಕ ‖ ತತ್ಪದನಖರಮಯೂ

53 ಖಲಸತ್ಪ್ರಷ್ಟಿತರಾಗರುಚಿರಪಲ್ಲವಿತದಯೋದ್ಯತ್ಪೂರ್ಣ್ಣಫಳಿತಬುಧಪಸಪತ್ಪೂಜ್ಯನವೀನಪಾರಿಜಾತಂಖ್ಯಾತಂ ‖ ಸ್ವ ಸ್ತಿಶ್ರೀಮದಗಣ್ಯಪುಣ್ಯನೃಪಗೇಹಂಗಂಡಭೇರಂಡತಂ

54 ತ್ರಸ್ತೋನಾಗ್ರಣಿಯೂಪವೇಶ್ವರಸಭಾರತ್ನಪ್ರದೀಪಂಜಗತ್ಪ್ರಸ್ತುತ್ಯಾಕೃತಿಮಂತ್ರಿಮಂಡಳಕದಂಡಾಧೀಶತತ್ತನ್ಮಹಾ ನಿಸ್ತಾರೈಕಶರಣ್ಯರೂಪನವಿತಂಗಂಭೀರರತ್ನಾಕರಂ ‖

55 ವ ‖ ಆದಂಡನಾಥಚೂಡಾಮಣಿಯನ್ವಯಾವತಾರವೆಂತೆಂದೊಡೆ ‖ ವೃ ‖ ಅತಿಶಯಮಾಯ್ತುದಾನಗುಣಮಿಟ್ಟಳ ಮಾಯ್ತುಭಿಮಾನದೇಳ್ಗೆಸಂತತಮೊಸೆದತ್ತುಬಂಧುಜನಸಂ

56 ಗತಿಪೆಂಪಳವಟ್ಟುದೂರ್ಜ್ಜಿತಾಕೃತಿದೊರೆವೆತ್ತುದಾಶ್ರಯಗುಣಂ ಪೆಸರ್ವೆತ್ತುದುಸತ್ಯಮೆಂಬಿನಂ ಚತುರಜನಂಚತುರ್ತ್ಥ ಕುಳದೀಪಕನೆಂಬುದುಚಟ್ಟಿಸೆಟ್ಟಿಯಂ ‖ ಕ ‖ ಪತಿಹಿ

57 ತಗುಣದಿಂದಮರುಂಧತಿಗೆಣೆ ಸೌಭಾಗ್ಯದೇಳ್ಗೆಯಿಂದಗ್ಗದಪಾರ್ವ್ವತಿಗೆ ದೊರೆಚಟ್ಟಸೆಟ್ಟಿಯ ಸತಿಭೂಭುವನಕ್ಕೆಜಕ್ಕಿ ಯಕ್ಕಂನೆಗಳ್ದಳು ‖ ವೃ ‖ ಪುರುಷನಮೇರುಚಟ್ಟಮರಸಂಗೆ

58 ಕುಳೋನ್ನತಿ ಪ್ರಿಷ್ಟಿಪುಟ್ಟಿದಂಹರಿಯಮಸೆಟ್ಟಿಲೋಕದೊಳಗಂಗಭವಂ ಗೆಣೆರೂಪಿನಿಂ ಕಳಾಪರಿಣತೆಯಿಂ ಚತುಮ್ಮು ಖನೊಳೋರೆಗೆವೈಭವದೇಳ್ಗೆಯಿಂಪುರಂದರನಸಮಾ

59ನವರ್ತ್ತದೊಳವಿಂಧನದುಗನುಸಾರಿಯೆಂಬಿನಂ || ಕ || ಹರಿಯುಮಸೆಟ್ಟಿಯ ಕುಳವಧು ಚರಿತ್ರವತಿ ಪುತ್ರವತಿ ಕಳಾವತಿ
ಲೋಕೋತ್ತರಮಾನವತಿ ಸರಸ್ವತಿ ಸಿರಿ ಸರಿಯೆಂಬವತ್ತು ಸು
60ಗ್ಗಿಯಕ್ಕಂ ನೆಗೞ್ದಳು || ರಸಮಿರ್ಪ್ಪುದು ಕರತಳದೊಳು ರಸಾಯನಂ ನುಡಿಯೊಳಿರ್ಪ್ಪುದೀಕ್ಷಣದೊಳ್ ಸೋಂಪೆಸೆವಮೃತ
ಮಿರ್ಪ್ಪುದೆನೆ ಸಂತೊಸದಿಂ ಸುಗ್ಗವ್ವೆ ತಣಿಪುವಳ್ ಪರಿಜನಮಂ ||
61ವೃ || ಹರಿಯಮಸೆಟ್ಟಿಗಂ ನೆಗೞ್ದ ಸುಗ್ಗಲೆಗಂ ಸುತನಾದನಲ್ತೆ ಬೇೞ್ಪರ ನಿಧಿ ಬಂಧುಸಂಕುಳದಭೀಷ್ಟಫಳಂ ಪರಿವಾರದು
ತ್ಸವಂ ಪರಹಿತಸಾಶ್ರಯಂ ಪರಮಧರ್ಮ್ಮದ
62ಮೊಯ್ಸಿರಿ ಸತ್ಯದುತ್ತರೋತ್ತರದಶೆ ಸತ್ಯದಾಯತನವಪ್ಪಮೃತೇಶ್ವರದಂಡನಾಯಕಂ || ಜಡರಂ ಜಾತಿವಿಹೀನರಂ ವಿಕಳ
ರಂ ನಾಣೊಕ್ಕರಂ ಮಿಕ್ಕರಂ ಪಡೆದೂ ದೋಷನಿವಾರಣ
63ಕ್ಕಮೃತದಂಡಾಧೀಶನಂ ಪುಣ್ಯದಿಂ ಪಡೆದಂ ಪದ್ಮಜನಲ್ಲದಂದು ನೆಗೞ್ದೀಗಾಂಭೀರ್ಯ್ಯವೀರ್ಯ್ಯಧೈರ್ಯ್ಯ ಮಿಕ್ಕಡುವಾರ್ಪ್ಪರೀ
ಕಡುನೇರ್ಪ್ಪರ್ ಭೂಭುವನದೊಳ್ ಪೇಳಂನ್ಯಸಾಮಾನ್ಯಮೇ || ಅಮಿತಂ ದಂಡೇಶರತ್ನಂ
64ಪ್ರಭುದಿಟಕೆ ಕೆಲದರ್ದ್ದರದಿಂ ಪರ್ವ್ವತಂ ರಮ್ಯವೆನಿಪ್ಪಂ ತಿರ್ಪ್ಪರಾಯಿದ್ದ ಳಪ್ಪ ಗೆಪುರುಳಿಲ್ಲಂ ದರೋಸಾಡಿಯೆನಸುದ್ಧ
ಮುಖಂತಳ್ತಿಲ್ಲಿ ಕೂರಾಳ ಧನಿ ಲಮೊಗಂದಲ್ಲಿ ಮಾದಾಸಿನಪ್ಪೋ
65ದ್ದ್ಯಮರೆಂತಂದಲ್ಲಿನಂಟಂ ವಿಷಮ ಸಮಯಮಾದಲ್ಲಿತಾನೇಕವಾಕ್ಯಂ || ಸುಱಿಯಲ್ಕಾಗದೆ ಮುಂನೆ ಸೂರ್ಯ್ಯನುದಯಂಗೆ
ಯ್ವಂನಮುನ್ನಿಸುತ್ತ ಮಿಂಬುಳುಗಳ್ ಮಿಕ್ಕಿನ ದಂಡನಾಥರರೆಬಕ್ಕ
66ರ್ಯ್ಯಕ್ಕೆ ಬಳ್ಕಕ್ಕದೇಂ ಗಬಿಪಲ್ ಗಲ್ಲದೆ ಸಲ್ವದಿಂತಮಿತ ದಂಡಾಧೀಶನಂ ಕಾಣ್ಬುದುಂ ಬಱಿಕಾ ಮರ್ಮ್ಮಂತ್ರಿಗಳಾಸ್ಸಮಗ್ರರೆ
ಣಿಸೂಬಲ್ಲಾಳನಾಸ್ಥಾನದೊಳ್ || ಸಿರಿಯುಂ ಪ್ರೇಪಿಪ ಗಿರಿತತ್ತತೋಱುವ
67ದುಬಲ್ವಂಪ್ರೇಮನಂ ಮೆಚ್ಚದಾಂತರನು ಗ್ರಾಜಿಯೊಳಿಕ್ಕಿ ತೋಱುವುದು ತಾನುಂ ಡುಟ್ಟುಬಿವೆರ್ಮ್ಮಂದು ಕೊಂಡಿರೆ ಮಾಣೆಂತ
ಬಿಬಲ್ಪದಾವಸಿರಿಯೆಂದಾತ್ತ್ರಣ್ಕಿ ಕೊತ್ತಿರ್ತತ್ತುರ್ಮಚ್ಚರಿ ಪಂಗತ್ತಿರ್ಗಸು
68ವಂಗೆ ಸಲ್ವನಮಿತಂ ದಂಡೇಶದಿಕ್ಕುಂಜರಂ || ಕಡುವಪ್ಪಿಂ ಭೀಮನೆಂಬಂ ನೆಗೞ್ದ ನೆಳೆಯೊಳಂದಾತನಿಂದೀತನನ್ಯೋನ್ಯಮುಡಿ
ಯಿಂದಂ ರಾಮನೆಂಬಂ ನೆಗೞ್ದ ನೆಳೆಯೊಳಂದಾತನಿಂದೀತನಾಗ್ಗಂ ಕುಡುವಪ್ಪಿಂ ಕರ್ಣ್ನನೆಂಬಂ ನೆಗ
69ೞ್ದ ನೆಳೆಯೊಳಂದಾತನಿಂದೀತನಿಂ ಪೇೞ್ವಡೆ ಮತ್ತಿಲ್ಲಾರುಮೆಂಬಂತೆ ಸೆದಪನಮಿತಂ ದಂಡನಾಥತ್ರಿಣೇತ್ರಂ || ಮಡಗಿದತಾಂ
ಬ್ರಶಾಸನಮದೊಂದೆಡೆ ಗೆತ್ತಿದ ಕಲ್ಲಶಾಸನಂ ನುಡಿವುದೆ ಮಂತ್ರಿಮುಖ್ಯನಮಿತಂನೆ
70ಪೆಕಾವುದ ನೀವುದಂ ತೊಡರ್ಪ್ಪಡ ಸಿರಿಕಂದಮಾನಸರ ಮೊಯ್ಸಿರಿಗಳ್ ನರಶಾಸನಂ ಮಸಂಬಡೆವಿಸಮಿತುತ್ತದಂ ಪೊಗೞ್ವಲೋ
ಕದನಾಂಗೆ ತಾಂಬ್ರಶಾಸನಂ | ಇಮತಾಂ ಬಲ್ಲಾಳರಾಜಾಭ್ಯುದಯಜಯ
71ವಶೀಮಂಗಳಾಚಾರಮೋಮೋಣಿದು ಪೂರ್ಣ್ಣಾಂಭೋನಿಧಾನಪ್ರಬಳಲಹರಿಕಾಪೂರನಿರ್ಗ್ಘೋಷಮೋ ಮತ್ತಿದ ಹರ್ಷ್ಷೋ
ತ್ಕರ್ಷವರ್ಷಾಂಬುದನಿನದಮೋ ಪೇಳೆಂಬಿನಂ ಭೋಜನೋತ್ಸಾಹದಿನೊಪ್ಪ
72ತ್ತಿರ್ಪ್ಪುದೋ ರಂತಮಿತನಮನೆಯೊಳ್ ವಿಪ್ರಕೋಟಿಪ್ರಘೋಷಂ || ಮೊಱಡಿಯುಮೇಲೆ ಮಾದು ಫಲಮಾದಪೊಲಾದುಮ
ತೀವಿನಿಂದಪೆರ್ಗ್ಗೆ ಜೆಮೊಪೆಯಲ್ಲದೆಂದೆನಿಪ ಬೆಳ್ವಲದಲ್ಲಿನವೀನ
73ಸೃಷ್ಟಿಕಣ್ದಿಱಿದುದು ದಂಡನಾಯಕಶಿಖಾಮಣಿಯಪ್ಪಮಿತಂ ಸಮುದ್ರವಿಖ್ಯಾತೆಬಿನೆನಿಪಂದದಿಂ ಗದುಗಿನೊಳ್ ನೆಱೆ ಕಟ್ಟಿಸಿ
ದಂ ತಟಾಕಮಂ || ಅಮೃತಮರೀಚಿ ನಿಟ್ಟದ ಕಿಲಿಟ್ಟುದು ಲೋ
74ಕದ ಕಣ್ಣಿ ಪುಣ್ಯಪುಂಜಮೆನೆ ಲಸಿತ್ತು ಯಾದವನೃಪೇಂದ್ರನ ಕೀರ್ತ್ತಿಯ ಬಿತ್ತುರಾಶಿಯಂ ಸಿಮಿರ್ದದೆನಿಪ್ಪ ಪೋಲಮಿತ
ನೊಪ್ಪಿರೆ ಮಾಡಿಸಿದಂ ಬೆಡಂಗು ಪೆತ್ತಮೃತಸಮುದ್ರದೊಳ್ ಮಹಿಮೆವೆತ್ತ
75ಮೃತೇಶ್ವರ ದಿವ್ಯಗೇಹಮಂ || ಅಮೃತ ಸಮುದ್ರಮದ್ರಿಮಥನಕ್ಕೆ ಗಿದಿಲ್ಲಿಗೆ ವಂದುದಿಂಬುವೆತ್ತ ಮರನದೀ . . ತೊಳಲಲಾಱದೆ
ವಿಶ್ರಮಿಸಿತ್ತು ಧಾತ್ರಿ ಗರ್ಭಮನೆಲೆದಪ್ಪಿನೀೞ್ದ ದೆನೆ ಧರ್ಮ್ಮದನೆ

76ಮ್ಮಾರ್ಗೆನೆಮ್ಮಾರ್ವಾಯಿತ್ತುಸಂದಮೃತಸಮುದ್ರಮೆಂಬಪರಿಪೂರ್ಣ್ಣ ತಟಾಕಮನೆಂತುಬಣ್ಣಿಪೆಂ ‖ ಒದವಿಪೊದಳ್ದನೀ
ಲ್ಲಿಘಳಸಂಕುಳದಿಂದೆಸೆದಿರ್ದ್ದಪಾರಿಜಾತದತಳಗೊಂಬಿನನ್ತೆಮೆಱೆದಿರ್ಪ್ಪಮೃತೇಶ್ವ

77ರದಂಡನಾಥನಗ್ಗದಸಹಜಾತರೊಳ್ಬುಧಜನಸ್ತುತರಲ್ಲದರಾರ್ಸಮಸ್ತಸಂಮದಮೆನೆಸಲ್ವುದಾರಪೆಗೊಂಡೊಡವಾ
ಪೆಸರುತ್ತಗೋತ್ತರಂ ‖ ಕಲಿದೇವಂದೇಪನಾತಂನುಡಿದನೆತೊಡಳಲ್ಲಾ

78ತನೊಳ್ಬಿತ್ತನೇನಿಶ್ಚಲಮಾತಂಕಾದನೇದೇವರಬರವಳವಿಂದಾತನಿಂತಾನ್ತನೇಮಾರ್ವ್ವಲಮಿಲ್ಲಾತಂಚಲಂಮಾಡಿದನೆಬಿದಿ
ಗಮಿಂಬಿಲ್ಲಮತ್ತಾತನಂಭೂತಳದೊಳ್ಪೋಲ್ವಾತನಾರ್ಬಾಪ್ಪಮಿತನೆವಡೆ

79ದಂತಂಮನಂಪುಣ್ಯಾಪುಂಜಂ ‖ ಸಮನೆನಲಾತನೊಳ್ಸಮನದಾರ್ಚಲಮೇತನಗಲ್ಲದಿಲ್ಲಚಾಗಮೆತನಗಲ್ಲದಿಲ್ಲಲಿತಾಕ್ಷ
ತಿಯೇತನಗಲ್ಲದಿಲ್ಲಭೋಗವೆತನಗಲ್ಲದಿಲ್ಲೆಸೆವಮಾನ್ತನವೇ ।

80ತನಗಲ್ಲದಿಲ್ಲಸತ್ಯಮೆತನಗಲ್ಲದಿಲ್ಲಪೆಱರ್ಗೇಂಕಲಿಗಂಭುವನೈಕಸೇವ್ಯನೋ ‖ ಕ‖ ಚಲದೊಳಭಿಮಾನದೊಳ್ಸತ್ಕುಲದೊ
ಳ್ಸತ್ಯದೊಳುದಾರದೊಳ್ಪರಹಿತದೊಳ್ಕಲಿಯಣ್ಣದೆನೆಗಲ್ದಿ

81ಪ್ಪಂಕಲಿಯಂಣ್ನಂಲೋಕದೊಳಗೆಕ್ಕೃತಯುಗಚರಿತಂ ‖ ಧುರದೊಳ್ಭೀಮನತಂನಾನೂರ್ಜ್ಜಿತನಯೋಪಾಯಂಗಳೊ
ಳ್ರೇವತೀಶ್ವರನಾಖ್ಯಾನದತಮ್ಮನಗ್ರಜಮನಸ್ಸಂತೋಷಲಕ್ಷ್ಮೀಪರಂಪರೆ

82ಯೊಳ್ರಾಮನತಂಮನೀಯಮಿತದಂಡೇಶಂಗೆತಂಮಂಕುಲಾಭರಣಂ ಶ್ರೀಪದಸಾಬ್ಜ ಭಾನುಮಸಣಯ್ಯಂಮಂತ್ರಿವಿದ್ಯಾ
ಧರಂ । ಶಿವಪಾದಶೇಖರಂದಾನವಿನೋದಂಸತ್ಯವಾಕ್ಯನಭಿಮಾನಧನಂಭು

83ವನಹಿತಂಕಟಕಕ್ಕೊಪ್ಪುವನಂಣ್ನನಪಟ್ಟವರ್ದ್ಧನಂಮಸಣಯ್ಯಂ‖ವೃ‖ ಬಸವಂದಂಡೇಶಚೂಡಾಮಣಿರಣಧವಳಂಗಂಡ
ಭೇರುಂಡನೊಲ್ದತ್ಥಿರ್ಸಿಬಂದಂಗಾಂತುನಿಂದಂಗಗಿದುಶರಣಮೆಂದಂಗೆಭೂಚಕ್ರ

84ದೊಳ್ಮಾನಸರೂಪಿಂದಿರ್ದ್ದಚಿನ್ತಾಮಣಿ ನೃಪಶಚಿವಾಕಾರದಿಂದಿರ್ದ್ದಕಳ್ಪಾನ್ತಸಮುದ್ಯದ್ವಹ್ನಿನಣ್ಪಿಂ ದಮಿತನಣು
ಗನಾಗಿರ್ದ್ದವಿದ್ಯಾಧರೇಂದ್ರಂ ‖ ಕಳದೊಳ್ಕಟ್ಟಂಕದೊಳ್ಬಂದಡಸಿದಬಯಲೊ

85ಳ್ಭಾಸೆಯೊಳ್ಕೋಟೆಯೊಳ್ದೋರ್ವ್ವಳದೊಳ್ತಳ್ತಂಕೆಯೊಳ್ಕೈದೆಗೆಯದಭರದೊಳ್ ಪೂಣ್ಕೆಯೊಳ್ನಚ್ಚಿನಾ
ಳ್ಮಾರ್ಬ್ಬಳದೊಳ್ಕಣ್ನಳ್ಕವಾಳ್ಹೊಯ್ಲಳನಕಟಕದೊಳ್ತಾನೆಸಂದಗ್ಗದಾ

86ಳಗ್ಗಳದಾಳ್ಬಲ್ಲಾಳದೇವಂಗಮಿತನಬಸವಂದಂಡನಾಥತ್ರಿಣೇತ್ರಂ ‖ ಎಸೆವೀಬಲ್ಲಾಳದೇವಂಗಮಿತನೆಬಲದೊಳ್ತ್ರೋ
ಳ್ಗೆಸಂದಿರ್ದ್ದಕೊಬ್ಬಾರ್ಳ್ಬಸವಂಬಲ್ಲಾಳನಾಸ್ಥಾಯಿಕೆಗಮಿತನೆದೀಪಂಪ್ರದೀಪ

87ಕ್ಕೆತೇಜಂಬಸವಂಬಲ್ಲಾಳರಾಜ್ಯಕ್ಕಮಿತನೆಮುಖಮಂತಾಮುಖಶ್ರೀಗೆನೇತ್ರಂ ಬಸವಂಮುಖ್ಯಪ್ರಭಾಪಕ್ಕೆರಿವರೆನೆಮತ್ತಾ
ರುಮಂಪೇಳಲುಂಟೇ ‖ ಕ ‖ ಮೂವರುಮನುಜಾತರಿನ್ತೆರಾವತಪಿಂದ

88ಮೃತಕಿರಣನಿಂಕೌಸ್ತುಭದಿಂದೇವಾವನಿಜಮೆಸೆವವ್ರೋಲೀವಸುಧಾತಳದೊಳೆಸೆವನಮಿತಚಮೂಪಂ ‖ ಸ್ವಸ್ತಿಸಮಸ್ತಭು
ವನರಾಜರಾಜಿವಿರಾಜಿತಚೂಡಾಮಣಿಮರೀ

89ಚಿಮಂಜರೀರಂಜಿತಚಳನನಳಿನಶ್ರೀಮದಮೃತೇಶ್ವರದೇವಲಬ್ಧವರಪ್ರಸಾದನುಂ। ಅನವರತಪಾತ್ರದಾನವಿನೋದನುಂ।
ಯಾದವಾನ್ವಯಗಗನಗಭಸ್ತಿಮಾಳಿನಿಕ್ಕಂಕಪ್ರತಾಪಚಕ್ರವ

90ತ್ತಿವೀರಬಲ್ಲಾಳದೇವರಾಜ್ಯಾಭ್ಯುದಯಕರಣಕಾರಣನುಂ। ವಿಜಯಗೋಮಿಸೀಮಂಗಳಾಯತನರತ್ನತೋರಣನುಂ।
ಚತುತ್ಥಕುಳಕುಮುದಿನೀಶರಚ್ಚಂದ್ರಚಂದ್ರಿಕೋಪಮಾನಮಾ

91ನಾನೂನಸರ್ವ್ವಲಕ್ಷ್ಣಣಸಂಪೂರ್ಣ್ಣಸುಗ್ಗಾಂಬಿಕಾಗರ್ಭ್ಬದುಗ್ಧಾರ್ಣ್ಣವಪಾರಿಜಾತನುಂಸೌಂದರ್ಯ್ಯವಿಜಿತಚೇತ್ರೋ
ಜಾತನುಂವೀರವೈರಿಧಾರಿಣೀನಾಥಹಸ್ತ್ಯಶ್ವರಥಪದಾತಿಸಂಘಾತನಿರ್ಘಾತಪ

92ಟಿಷ್ಟನಿಷ್ಠುರಕೃಪಾಣಕುಳಿಶದಂಡಮಂಡಿತಭುಜಾಮಂಡಳನುಂವೀರಲಕ್ಷ್ಮೀಪ್ರಸಾದನೋಪಚಿತಕರ್ಣ್ನಕುಂಡಳನುಂ।
ಸನ್ಧಿವಿಗ್ರಹಯಾನಾಸನಸಂಶ್ರಯದ್ವೈಧೀಭಾವಭಾವಿತಪ್ರಯೋ

93ಗನಿಪುಣಮಂತ್ರಿಮಂಡಳಿನಿತ್ಯಾವಳೋಕರತ್ನದರ್ಪ್ಪಣನುಂ । ಪರಿವಾರೆಸಿವಕಚಿತ್ತಸಂತರ್ಪ್ಪಣನುಂ । ವಿದ್ಯುದ್ದಂಡ ನರ್ತ್ತನಾನುಸಾರಿಸ್ವೈರಚಾರಕೂಕಳತುರಂಗಮಾರೂಢಪ್ರೌಢದಂಡಾಂ

94ಕಶಬ್ದಶಿಕ್ಷೋಪಜಾತರೇಪರೇಖಾವಿಳಾಸವತ್ಸರಾಜನುಂ । ಶಸ್ತ್ರಶ್ರಮಾಚಾರ್ಯ್ಯಭಾರದ್ವಾಜನುಂ । ಕಲಿದೇವಮಸಣಿ ದೇವಬಸವರಾಜಪ್ರಸಿದ್ಧಸೋದರತ್ರಿತಯಶಾಖಾನುಬಂಧಬಂ

95ಧುಜನಫಳಪ್ರದಾಯಕಕಲ್ಪವೃಕ್ಷನುಂ । ಶರಣಾಗತಮಂಡಳಿಕರಕ್ಷಾದಕ್ಷನುಂ । ಸತ್ಯತ್ಯಾಗವಿಕ್ರಮಕ್ರೀಡಾನವೀನರಾ ಧೇಯನುಂ । ಶೌಚಗಾಂಗೇಯನುಂ । ಸ್ವಾಮಿದ್ರೋಹಮೋಹಾನ್ಧ

96ಕಾರಸಂಹಾರಸಹಸ್ರಕಿರಣನುಂ । ಯಾದವಕಟಕರತ್ನಾಭರಣನುಂ । ದಂಡನಾಥಮೌಳಿಮಾಣಿಕ್ಯನುಂ । ದಂಡನಾಥ ಕುಸುಮಕೋದಂಡನುಂ । ದಂಡನಾಥಗಂಡಮಾರ್ತ್ತಂಡನುಂ । ದಂಡನಾಥದಿಕ್ಕುಂಜ

97ರನು(ಂ) । ಮುದ್ದಂಡದಂಡನಾಥಕೋಳಾಹಳನುಂ । ವಾಚಾಳದಂಡನಾಥಹಾಳಾಹಳನುಂ । ಚೋಳದಂಡನಾಥಕಾಳ ರಾಕ್ಷಸನುಂ । ಮಾಳವದಂಡನಾಥಮದನತ್ರಿಣೇತ್ರನುಂ । ಗೂರ್ಜ್ಜರದಂಡನಾಥಗಿರಿವ

98ಜ್ರದಂಡನುಂ । ರಾಯದಂಡನಾಥಗಂಡಭೇರುಂಡನುಂ । ಚೋಳಬಾಳಕಾಹಂಸತಿಳಕನುಂ । ಕೇರಳಸಿತಂಬಿನೀಹಾರಹಾ ರನುಂ । ಮಾಳವಮಾನಿನೀಮನೋರಂಜನನುಂ । ಕರ್ಣ್ಣಾಟಕಾಮಿನೀಕರ್ಣ್ಣಾಭರಣನುಂ । ಪ್ರಧಾನ

99ಜಂಗಮಕೇದಾರನುಂ । ಸಕಳಜನಾಧಾರನುಮೆನಿಸಿಮಹಿಮೆಗಾಸ್ಪದಮಾದಮೃತೇಶ್ವರದಂಡನಾಯಕಂಕಗ್ಗಿಯವೃತ್ತಿ ಯೊಳಗಣಮೃತಸಮುದ್ರದೊಳ್ಶ್ರೀಮದಮೃತೇಶ್ವರದೇವರಂ

100ಸುಪ್ರತಿಷ್ಠಿತಂಮಾಡಿಸಕವರ್ಷಂ ೧೧೧೯ನೆಯಪಿಂಗಳಸಂವತ್ಸರದಪುಷ್ಯಬಹುಳಸಪ್ತಮಿಸೋಮವಾರದುತ್ತರಾಯ ಣಸಂಕ್ರಮಣದಂದುಶ್ರೀಮದುವಜ್ರೇಶ್ವರದೇವರಸಂನಿಧಾನದೊಳ್

101ಪಾದಪೂಜಾಪುರಸ್ಸರಂಶ್ರೀಮತ್ಪ್ರತಾಪಚಕ್ರವರ್ತ್ತಿವೀರಬಲ್ಲಾಳದೇವರಶ್ರೀಹಸ್ತದಿಂಧಾರಾಪೂರ್ವ್ವಕಂಪಡೆದುತಂನ ಮಾಡಿಸಿದಮೃತೇಶ್ವರದೇವರಅಂಗಭೋಗರಂಗಭೋಗಕ್ಕಂ । ಜೈತ್ರ

102ಪವಿತ್ರಾರೋಪಣಕ್ಕಂ । ದೇವರಪೂಜಾರಿಗಪರಿಚಾರಕರ್ಗ್ಗಂ ಬ್ರಾಹ್ಮಣರಾಹಾರದಾನಕ್ಕಂ । ಖಂಡಸ್ಫುಟಿತಜೀ ರ್ಣ್ಣೋದ್ಧಾರಕ್ಕವಾಗಿಅಸಂದಿನಾಡೊಳಗಣಗ್ರಹಾರಹುಣಿಸೆಯಕಟ್ಟವಂಸ

103ರ್ವ್ವನಮಸ್ಯವಾಗಿಕೊಟ್ಟದತ್ತಿ । ಹಾದಿಯಕೆಱೆಯನಾಗಗೌಡನುಂಕಗ್ಗಿಯಭಾಗೆಯಪ್ರಭುಗಾವುಂಡುಗಳ್ ಪ್ರಮು ಖವಾಗಿಆಭಾಗೆಯಗಂಗವುರವಂಸರ್ವ್ವನಮಸ್ಯವಾಗಿಬಿಟ್ಟ

104ದತ್ತಿ । ಕೂಂಟನಮಡುವಿನಕೇತಗವುಡನಬಿಕಗೌಡಮಾಳಗೌಡನಿನ್ತೀಮೂವರುಂತಂಮಹೊಲದೊಳಗೆಅಮೃತೇಶ್ವ ರದೇವರ್ಗ್ಗೆದೇವತಾಲಯಕ್ಕಂಪುರಮಂಕಟ್ಟಲಾಚಂದ್ರತಾರಂಬರಂ

105ಸಲ್ವನ್ತಾಗಿಕೊಟ್ಟಭೂಮಿ । ಮತ್ತಾಹೊಲದೊಳಗೆಪುರದಿಂಮೂಡಲುಂತೆಂಕಲುಂಗಂಗನಗಳಿಗದ್ದೆಮತ್ತರೊಂದು । ತೋಟಮತ್ತರೊಂದು । ಅನ್ತುಮತ್ತರೆರಡಂಕೊಟ್ಟದತ್ತಿ । ಹಾದಿಯಕೆ

106ಱೆಯಪ್ರಭುನಾಗಗವುಂಡಂತಂನಹೊಲದೊಳಗೆಪುರದಪಡುವಣಎಱೆಯಮನಮಸಣಗವುಡನಕೆಱೆಯಕೆಳಗೆ ಗದ್ದೆಮ ತ್ತರೊಂದಂಕೊಟ್ಟದತ್ತಿ । ಅಮೃತಸಮುದ್ರದಮೂಡಣ

107ಕೋಡಿಯಲ್ಲಿನಾಗಗೌಡಮುಖ್ಯವಾಗಿಬಾಚಲೇಶ್ವರದಪಟ್ಟಣಸ್ವಾಮಿಮಹದೇವಸೆಟ್ಟಿಯರುತಂಮಗೌಡಿಕೆಯನೇಱಿ ಲಕೆಱೆಯಚಿಣ್ಣಾವಗಟ್ಟದಕೆಱೆಯಕೆಳಗೆಗಂಗನ

108ಗಳಿಯಲುಗದ್ದೆಮತ್ತರೊಂದಂಕೊಟ್ಟದತ್ತಿ । ಅಮೃತಸಮುದ್ರದಪಡುವಣಕೋಡಿಯಲ್ಲಿ ॥ ಕ ॥ ಅಯ್ಯಣಪಾಡಿಯೊ ಳಂಕಡುರಯ್ಯಂಜಗದೊಳಗೆಕೊಟ್ಟುಕುಣಿಮಿಗ್ರಾಮ

109ಕ್ಕಯ್ಯನೆನಿಸಿರ್ದ್ದನಾರುದ್ರಯ್ಯಂಗಂಮಂತ್ರಿಜಕ್ಕನಾತ್ಮಜನಾದಂ॥ ವ ॥ ಆಹೆಗ್ಗಡೆಜಕ್ಕಯ್ಯನಮೃತೇಶ್ವರದಂಡನಾ ಯಕರಬೆಸದಿಂದಮೃತೇಶ್ವರದೇವರಭವನಮಂಸತಿಚೆಲ್ವನಾಗಿಮಾ

110ಡಿಸಿದಡೆಯಮೃತೇಶ್ವರದಂಡನಾಯಕರುಮೆಚ್ಚಿ ಕೊಟ್ಟಗದ್ದೆಗಂಗನಗಳೆಯಲುಕಂಬಹನೆರಡು | ಮತ್ತಂದವಸಿಗ
ಗ್ಗೆಗಂಗನಗಳೆಯಲುಕಂಬವಱುವತ್ತು | ಮತ್ತಂದೇವರನೈವೇ
111ದ್ಯಕ್ಕೆಗದ್ದೆಗಂಗನಗಳೆಯಲುಕಂಬನಾಲ್ವತ್ತುಅಂತುಮತ್ತರೊಂದುಕಂಬಹನೆರಡಂಕೊಟ್ಟದತ್ತಿ | ಅಮೃತೇಶ್ವರದೇ
ವರ್ಗ್ಗೆದೋರಸಮುದ್ರದಭತ್ತವಸರದಂಗಡಿಯಸಮಸ್ತನಕ
112ರಂಗಳುಂಮುಖ್ಯವಾಗಿಗುಂಮೇಶ್ವರದಂಗಡಿ | ಬೊಮ್ಮಲದೇವಿಯರಂಗಡಿ | ಕೇತಲದೇವಿಯರಂಗಡಿ | ಚಂದ್ರಮೌ
ಳಿಯಣ್ಣನಂಗಡಿ | ಬೊಪ್ಪದೇವನಬಸದಿಯಂಗಡಿ | ಬೆಳುಹೂರಂಗಡಿ | ಪ್ರತ್ಯೇಕ
113ಪ್ರತ್ಯೇಕಸೆಡೆಅರವನವೊಂದು | ಚೈತ್ರಕ್ಕೆಹಾಗವೊಂದು | ಪವಿತ್ರಕ್ಕೆಹಾಗವೊಂದು ‖ ವೃ ‖ ಪ್ರಿಯದಿಂದಿಂತಿದನೆಯ್ದೆ
ಕಾವನುನುಜಂಗಾಯುಂಜಯಶ್ರೀಯುಮಕ್ಕೆಯಿ
114ದಂಕಾಯದೆಕಾಯ್ವಪಾಪಿಗೆಕುರುಕ್ಷೇತ್ರಂಗಳೊಳು ವಾರಣಾಸಿಯೊಳೆ ಕೋಟಿಮುನೀಂದ್ರರಂ ಕವಿಲೆಯಂವೇದಾಢ್ಯ
ರಂಕೊಂನ್ದದೊಂದಯಶಂಪೊರ್ದ್ದುಗುವೆನ್ದುಸಾಱಿದಪುವೀಶೈ
115ಳಾಕ್ಷರಂಧಾತ್ರಿಯೊಳು | ಸ್ವದತ್ತಾಂಪರದತ್ತಾಂವಾಯೋಹರೇತಿವಸುಂಧರಾ | ಷಷ್ಟಿರ್ವ್ವರ್ಷಸಹಸ್ರಾಣಿವಿಷ್ಠಾ
ಯಾಂಜಾಯತೇಕ್ರಿಮಿಃ | ಉದ್ದಂಡಕವಿಭಾಳನೇತ್ರಂಸಕವಿ
116ಜನಮಿತ್ರಂಜನ್ನಯ್ಯನಕವಿತೆ | ಸರಸ್ವತೀಕರ್ಣ್ಣಪತ್ರಂಕಮನೀಯಗಾತ್ರಂಲೊಕ್ಕಿಗುಂಡಿಯಮಹದೇವಣ್ಣಂಗಳಶಿ
ಷ್ಯನಾಕಣ್ಣನಬರಪ | ಬಿರುದಕಂಡರಣೆಕಾಱ
117ಕೋಳಾಹಳಂರೂವಾರಿಮಲ್ಲೋಜನಕಂಡರಣೆ ‖ ಮಂಗಳಮಹಾ ಶ್ರೀ ಶ್ರೀ ‖ ಕಗ್ಗಿಯವೃತ್ತಿಯಸಾವಂತಮಾಳಗೌಡ
ನಿಂಕಿಱಿಯಬಂಮಗಾವುಂಡಂಗೆ | ವೃ |
118ನಿರುಪಮದಾನಿಬಂಮಗವುಡಂಗವನಂಗನೆಮಾಕಗೌಡಿಗೀಹರಿಹರನಬ್ಜಸಂಭವರು ಪುಟ್ಟುವವೊರ್ಗ್ಗದೆಪುಟ್ಟಿದರನ್ಸೂರ್ತ
ರ್ವ್ವರನಿಧಿಕೇತಗೌಡನೆಱೆಯಂಗವುಂಡನುಮಾ
119ಳಗೌಡರಾದರದೊಳೆಕೊಟ್ಟರೊಪ್ಪುವಮೃತೇಶಪುರಕ್ಕತಿಸೇವ್ಯಭೂಮಿಯಂ ‖ ಬ್ರಹ್ಮಪುರಿಯಬ್ರಾಹ್ಮಣರ್ಗ್ಗೆಗಂಗವು
ರದಕೆಱೆಯಕೆಳಗೆಗದ್ದೆ | ಗಣಪತಿಭಟ್ಟಉಪೇಂ
120ದ್ರಭಟ್ಟಕುದುರೆಯಪ್ಪಯ್ಯ ‖ ಬಮ್ಮಯ್ಯ | ಕೂಚಯ್ಯ | ನಾಗದೇವಭಟ್ಟ | ದಾಡಿಗೆಯಪ್ಪಯ್ಯ | ನಾರಣನಾ
ಗದೇವ | ಹರಿಹರಪೆದ್ದಿ | ಯಿನ್ತಿನಿಬರ್ಗ್ಗಂಮತ್ತರೊಂದುಕಂಬಹತ್ತು | ಅಮೃತಸಮುದ್ರದಲ
121ಪ್ಪಯ್ಯಂಗೆಕಂಬಹತ್ತು

46

ಅದೇ ದೇವಸ್ಥಾನದ ಒಳತೊಟ್ಟಿಯಲ್ಲಿ ನೆಟ್ಟಿರುವ ೧ನೇ ವೀರಕಲ್ಲು.

ಪ್ರಮಾಣ 3′ × 2′ 9″.

1ಭಾವಸಂವತ್ಸರದಆಶ್ವಯುಜಸು ೧೦ ಸೋ | ದೋರಸಮುದ್ರದಬೀಡಿನೊ
2ಳಗೆಯಿಟ್ಟಗೆಯಕೇರಿಯಲ್ಲಿಖಾಣದಬಸವೆಯದಂಣ್ನಾ
3ಯಕರಮಗಅಮಿತೆಯದಂಣ್ನಾಯಕನುಗುಜ್ಜರರ
